ಕರ್ನಾಟಕ ಸರ್ಕಾರ

# ಅಭ್ಯಾಸ ಪುಸ್ತಕ

## (ಪರಿಷ್ಕೃತ ಪಠ್ಯಾಧಾರಿತ ಚಟುವಟಿಕೆ ಸಹಿತ)

## ವಿಷಯ : ಕನ್ನಡ

## ಭಾಗ – 1

# 10

## ಹತ್ತನೆಯ ತರಗತಿ

# 2020-21

ಹೆಸರು: ______________________________

ಶಾಲೆಯ ಹೆಸರು: ______________________________

______________________________

**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ**

100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ

ಬೆಂಗಳೂರು–560085.

# ಅಭ್ಯಾಸ ಪುಸ್ತಕ ರಚನಾ ಸಮಿತಿ

## ಪರಿಕಲ್ಪನೆ ಮತ್ತು ಮಾರ್ಗದರ್ಶನ

| | | |
|---|---|---|
| ಎಸ್.ಆರ್.ಉಮಾಶಂಕರ್. ಭಾ.ಆ.ಸೇ. .<br>ಪ್ರಧಾನ ಕಾರ್ಯದರ್ಶಿಗಳು<br>ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ<br>ಬೆಂಗಳೂರು | ಡಾ॥ ಕೆ. ಜಿ. ಜಗದೀಶ್, ಭಾ.ಆ.ಸೇ.<br>ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ<br>ಬೆಂಗಳೂರು | ಡಾ॥ ಎಂ. ಟಿ. ರೇಜು, ಭಾ.ಆ.ಸೇ.<br>ರಾಜ್ಯ ಯೋಜನಾ ನಿರ್ದೇಶಕರು<br>ಸಮಗ್ರ ಶಿಕ್ಷಣ, ಬೆಂಗಳೂರು |

## ಸಲಹೆ ಮತ್ತು ಮಾರ್ಗದರ್ಶನ

ಎಮ್.ಆರ್. ಮಾರುತಿ, ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು

ಟಿ. ಎನ್. ಗಾಯತ್ರಿದೇವಿ, ಸಹ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು

ಎನ್. ಕೆಂಚೇಗೌಡ, ಉಪ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು

ಅಂಜಲೀನ ಕ್ರಿಸ್ಟಿನಾ, ಕಾರ್ಯಕ್ರಮ ಸಂಯೋಜಕರು ಹಾಗೂ ಹಿ. ಸ. ನಿ., ಡಿ.ಎಸ್.ಇ.ಅರ್.ಟಿ ಬೆಂಗಳೂರು

ಶ್ರೀಧರ್. ಎ ಪರಿಶೀಲಕರು ಹಾಗೂ ಹಿರಿಯ ಉಪನ್ಯಾಸಕರು ಡಯಟ್ ತುಮಕೂರು

## ಸಂಪನ್ಮೂಲ ವ್ಯಕ್ತಿಗಳು

ಮಹಾದೇವಪ್ಪ ಕೆ. ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮೈಸೂರು ಮಾರ್ಗದರ್ಶಕರು

ಸತೀಶ್.ಕೆ.ಸಿ ಉಪನ್ಯಾಸಕರು ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆ ಮೈಸೂರು.

ವೇಂಕಟಾಚಲ. ಜಿ ಮುಖ್ಯ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ ಗಾಂಧೀ ನಗರ, ಹೆಚ್.ಡಿ.ಕೋಟೆ ಮೈಸೂರು

ರವೀಶ್ ಕುಮಾರ್. ಬಿ ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ ಮೈಸೂರು ತಾಲ್ಲೂಕು

ಶ್ರೀಕಂಠ ಶೆಟ್ಟಿ  ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಹೊಸಹುಂಡಿ ಮೈಸೂರು ತಾಲ್ಲೂಕು

ಬಾಲಕೃಷ್ಣಯ್ಯ. ಬಿ ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಬೋಗಾದಿ ಮೈಸೂರು ತಾಲ್ಲೂಕು

ಮಹದೇವ ಪ್ರಸಾದ್. ಹು. ವ. ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಮೇಟಗಳ್ಳಿ ಮೈಸೂರು ತಾಲ್ಲೂಕು

ಆನಂದ. ಎಸ್ ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ವಿನಾಯಕ ನಗರ ಮೈಸೂರು

ಸುರೇಶ್. ಎಂ. ಎನ್ ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಎನ್. ಆರ್. ಮೊಹಲ ಮೈಸೂರು

ಶಿವರಾಜ್ ಹೆಚ್. ಎಂ ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಕಂಪಲಾಪುರ, ಪಿರಿಯಾಪಟ್ಟಣ ಮೈಸೂರು

ಸಂಜಯ್ ಕುಮಾರ್. ಹೆಚ್. ಕೆ ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಉದ್ಬೂರು ಮೈಸೂರು ತಾಲ್ಲೂಕು

ಸವಿತಾ. ಬಿ. ಟಿ ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಹುಡ್ಕೋ ಬನ್ನಿಮಂಟಪ ಮೈಸೂರು ಉತ್ತರ

ಧ್ರುವಜ್ಯೋತಿ. ಸಿ ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಗಿರಿಯಾ ಭೋವಿಪಾಳ್ಯ ಮೈಸೂರು ಉತ್ತರ

ಹೇಮಲತ ಬಿ. ಉಪನ್ಯಾಸಕರು ಡಯಟ್ ರಾಮನಗರ

ನಿರ್ಮಲ ಸಿ.ಜಿ. ದ್ವಿದ. ಸಹಾಯಕರು ಡಿಎಸ್ಇಆರ್‌ಟಿ ಬೆಂಗಳೂರು

# ಮುನ್ನುಡಿ

ಶಿಕ್ಷಣದ ಧ್ಯೇಯೋದ್ದೇಶಗಳಲ್ಲಿ ಆಗುತ್ತಿರುವ ಬದಲಾವಣೆಗಳು ಹಾಗೂ ಕಲಿಕೆಯ ವಿಧಾನವು ಪರೀಕ್ಷೆ/ಪಠ್ಯಪುಸ್ತಕಗಳನ್ನು ಆಧರಿಸದೇ ಸ್ವಕಲಿಕೆ ಮತ್ತು ಸಹಕಲಿಕೆಯನ್ನು ಆಧರಿಸುವತ್ತ ಸಾಗುತ್ತಿರುವ ಹಿನ್ನೆಲೆಯಲ್ಲಿ ತರಗತಿಯಲ್ಲಿ ಮಕ್ಕಳಿಗೆ ಕಲಿಕೆಗೆ ಅನುಕೂಲಿಸುವ ಸನ್ನಿವೇಶಗಳನ್ನು ನೀಡುವುದರೊಂದಿಗೆ ಉತ್ತಮವಾದ ಕಲಿಕಾ ಸಾಮಗ್ರಿಗಳನ್ನು ಒದಗಿಸುವುದು ಅತ್ಯಾವಶ್ಯಕವಾಗಿದೆ. ಆದ್ದರಿಂದ 2017–18ನೇ ಶೈಕ್ಷಣಿಕ ವರ್ಷದಲ್ಲಿ 4 ರಿಂದ 9ನೇ ತರಗತಿಗಳಿಗೆ ಕನ್ನಡ ಮತ್ತು ಗಣಿತ ವಿಷಯಗಳಲ್ಲಿ ಹಾಗೂ 5 ರಿಂದ 9 ನೇ ತರಗತಿಗಳಿಗೆ ಇಂಗ್ಲಿಷ್ ವಿಷಯದಲ್ಲಿ ಅಭ್ಯಾಸ ಪುಸ್ತಕಗಳನ್ನು ರಚಿಸಲಾಗಿದೆ. ಈ ಅಭ್ಯಾಸ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಗಿದ್ದು, ಇದನ್ನು ಬಳಸಿದ ತರಗತಿ ಶಿಕ್ಷಕರಿಂದ, ಪೋಷಕರಿಂದ ಹಾಗೂ ಶಿಕ್ಷಣಾಸಕ್ತರಿಂದ ಸಲಹೆ, ಹಿಮ್ಮಾಹಿತಿಗಳು ಬಂದಿದ್ದು, 2019–20ನೇ ಸಾಲಿಗೆ ಇವುಗಳನ್ನು ಪರಿಷ್ಕರಿಸಿ, ಅಗತ್ಯ ತಿದ್ದುಪಡಿ ಮಾಡಲಾಗಿದೆ. ಪೋಷಕರ ಅಪೇಕ್ಷೆಯಂತೆ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಈ ವರ್ಷದಿಂದ ಕನ್ನಡ ವಿಷಯಕ್ಕೆ ಸಂಬಂದಿಸಿದಂತೆ ಅಭ್ಯಾಸ ಪುಸ್ತಕವನ್ನು ರಚಿಸಲಾಗಿದೆ. ಪ್ರತಿ ರೂಪಣಾತ್ಮಕ ಮೌಲ್ಯಮಾಪನದ ಅಂತ್ಯದಲ್ಲಿ ಕಿರು ಪರೀಕ್ಷೆಯನ್ನು (Micro test) ನೀಡಿದ್ದು, ಸ್ವ ಮೌಲ್ಯಮಾಪನ ಮಾಡಲು ವಿದ್ಯಾರ್ಥಿಗಳಿಗೆ ಸ್ವ ಮೌಲ್ಯಮಾಪನ ಸಾಧನವನ್ನು ನೀಡಿದೆ.

ಶ್ರೇಣೀಕರಿಸಿದ ಅಭ್ಯಾಸಗಳನ್ನು ಈ ಅಭ್ಯಾಸ ಪುಸ್ತಕದಲ್ಲಿ ನೀಡಿದ್ದು, ಈ ಅಭ್ಯಾಸಗಳು ವೈವಿಧ್ಯತೆಯಿಂದ ಕೂಡಿವೆ. ಹೆಚ್ಚಿನ ಅಭ್ಯಾಸಗಳು ಗಳಿಸಿದ ಜ್ಞಾನವನ್ನು ಜೀವನದಲ್ಲಿ ಅಳವಡಿಸುವಂತಹವುಗಳಾಗಿವೆ. ಈ ಅಭ್ಯಾಸ ಪುಸ್ತಕಗಳಲ್ಲಿ ಶಿಕ್ಷಕರಿಗೆ ಚಟುವಟಿಕೆಗಳೊಂದಿಗೆ ಸೂಚನೆಗಳನ್ನು ನೀಡಿದ್ದು, ಶಿಕ್ಷಕರು ಅವುಗಳನ್ನು ಓದಿ ತರಗತಿಯಲ್ಲಿ ಮಕ್ಕಳ ಕಲಿಕೆಗೆ ಅತ್ಯಾವಶ್ಯಕವಾದ ಸನ್ನಿವೇಶಗಳನ್ನು ಒದಗಿಸಿಕೊಡಬೇಕು. ಈ ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಚಟುವಟಿಕೆಗಳ ಗುರಿಗಳು ಮಕ್ಕಳು ಅತ್ಯಾವಶ್ಯಕವಾದ ಸಾಮರ್ಥ್ಯಗಳನ್ನು ಕರಗತ ಮಾಡಿಕೊಳ್ಳಲು ಸಹಾಯಕವಾಗುತ್ತವೆ. ಕ್ಲಿಷ್ಟಕರ ಭಾಗಕ್ಕೆ ಹೆಚ್ಚಿನ ಚಟುವಟಿಕೆ ಹಾಗೂ ಕಡಿಮೆ ಕ್ಲಿಷ್ಟಕರ ಭಾಗಕ್ಕೆ ಕಡಿಮೆ ಚಟುವಟಿಕೆಗಳನ್ನು ನೀಡಲಾಗಿದೆ. ಈ ಚಟುವಟಿಕೆಗಳನ್ನು ತರಗತಿಗಳಲ್ಲಿ, ತರಗತಿಯ ನಂತರ ಅಥವಾ ಮನೆಯಲ್ಲಿ ಮಾಡಬಹುದಾಗಿದೆ. ಯಾವುದೇ ವಿಷಯಕ್ಕೆ ನೇರ ವ್ಯಾಖ್ಯೆಯನ್ನು ನೀಡದೆ ಆಕರ್ಷಕ ಚಿತ್ರ, ಓದು, ಬರಹದ ಮೂಲಕ ಮಕ್ಕಳು ಅದನ್ನು ಅರ್ಥೈಸಿಕೊಳ್ಳುವಂತೆ ಸರಳವಾಗಿ ರೂಪಿಸಲಾಗಿದೆ. ಇಲ್ಲಿ ನೀಡಿರುವ ಚಟುವಟಿಕೆಗಳೇ ಅಂತಿಮವಲ್ಲ. ಕಲಿಕೆಗೆ ಸಂಬಂಧಿಸಿದಂತೆ ಪರಿಸರದಲ್ಲಿನ ಅಂಶಗಳನ್ನು ಆಧರಿಸಿ ಕಲಿಯಲು ಮಗುವಿಗೆ ಮುಕ್ತ ಅವಕಾಶ ನೀಡಬೇಕು. ಮಗು ಮಾಡಿದ ಚಟುವಟಿಕೆಗಳನ್ನು ಗಮನಿಸಿ ಶಿಕ್ಷಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸಲಾಗಿದೆ.

ಅಭ್ಯಾಸ ಪುಸ್ತಕಗಳ ರಚನೆಯಲ್ಲಿ ಸಹಕರಿಸಿದ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (ಆರ್.ಎಮ್.ಎಸ್.ಎ), ಕರ್ನಾಟಕ ಪಠ್ಯಪುಸ್ತಕ ಸಂಘ ಹಾಗೂ ರಚನಾ ಸಮಿತಿಯವರಿಗೆ ಡಿ.ಎಸ್.ಇ.ಆರ್.ಟಿ ಆಭಾರಿಯಾಗಿದೆ. ಈ ಅಭ್ಯಾಸ ಪುಸ್ತಕಗಳನ್ನು ವಿದ್ಯಾರ್ಥಿಗಳು ನಿರೀಕ್ಷಿತ ಉದ್ದೇಶಕ್ಕೆ ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಬೇಕೆಂಬುದು ನಮ್ಮ ಆಶಯ. ಆಗ ನಿಜವಾದ ಅರ್ಥದಲ್ಲಿ ಗುಣಮಟ್ಟದ ಶಿಕ್ಷಣವನ್ನು ಸಾಕಾರಗೊಳಿಸಲು ಸಾಧ್ಯವಾಗುತ್ತದೆ.

ದಿನಾಂಕ : 16–01–2020
ಬೆಂಗಳೂರು

ಎಸ್.ಆರ್.ಉಮಾಶಂಕರ್.ಭಾ.ಆ.ಸೇ.
ಪ್ರಧಾನ ಕಾರ್ಯದರ್ಶಿಗಳು
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ
ಬೆಂಗಳೂರು

# ಪರಿವಿಡಿ


| ಕ್ರ.ಸಂ | ವಿಷಯ | ಪುಟ ಸಂಖ್ಯೆ |
|---|---|---|
| | ಮುನ್ನುಡಿ | |
| | ಕಲಿಕಾ ಫಲಗಳು | |
| 1 | ವರ್ಣಮಾಲೆ | 1–7 |
| 2 | ನಾಮಪದಗಳು | 8–15 |
| 3 | ವಿಭಕ್ತಿ ಪ್ರತ್ಯಯಗಳು | 16–21 |
| | ಕಿರುಪರೀಕ್ಷೆ – 1 | 22–23 |
| 4 | ಕ್ರಿಯಾಪದಗಳು | 24–31 |
| 5 | ಸಂಧಿಗಳು | 32–36 |
| 6 | ಸಮಾಸಗಳು | 37–39 |
| | ಕಿರುಪರೀಕ್ಷೆ – 2 | 40–41 |
| 7 | ಪದಗಳು | 42–47 |
| 8 | ದ್ವಿರುಕ್ತಿ – ಜೋಡುನುಡಿಗಳು | 48–52 |
| 9 | ನುಡಿಗಟ್ಟುಗಳು | 53–55 |
| 10 | ಅವ್ಯಯಗಳು | 56–58 |
| | ಕಿರುಪರೀಕ್ಷೆ – 3 | 59–90 |
| 11 | ಕೃದಂತಗಳು | 61–65 |
| 12 | ತದ್ಧಿತಾಂತಗಳು | 66–71 |
| 13 | ವಾಕ್ಯ ಪ್ರಕಾರಗಳು | 72–74 |
| 14 | ಲೇಖನ ಚಿಹ್ನೆಗಳು | 75–78 |
| | ಕಿರುಪರೀಕ್ಷೆ – 4 | 79–80 |


**ವಿದ್ಯಾರ್ಥಿಗಳು ಗಮನಿಸಬೇಕಾದ ಅಂಶಗಳು**

✶ ಈ ಅಭ್ಯಾಸ ಪುಸ್ತಕದ ಪ್ರತಿ ಪುಟವನ್ನು ದಿನಕ್ಕೊಂದರಂತೆ ಅಭ್ಯಾಸ ಮಾಡಬೇಕು.

✶ ಅಭ್ಯಾಸ ಪುಸ್ತಕದಲ್ಲಿ ಒಂದು ಪುಟ ಪೂರ್ಣಗೊಳಿಸಿದ ನಂತರವೇ ಮುಂದಿನ ಪುಟಕ್ಕೆ ಹೋಗಬೇಕು.

✶ ಚಟುವಟಿಕೆಗಳು ಅರ್ಥವಾಗದಿದ್ದಲ್ಲಿ ಸ್ನೇಹಿತರ/ಶಿಕ್ಷಕರ ಸಹಾಯ ಪಡೆಯುವುದು.

✶ ಸ್ವಯಂ ಮೌಲ್ಯ ಮಾಪನ ಪುಟದಲ್ಲಿ ನಿಮಗಿಷ್ಟವಾದ ಚಟುವಟಿಕೆಗಳಿಗೆ '☺' ಸಂಕೇತವನ್ನು, ಭಾಗಶಃ ಇಷ್ಟವಾಗಿದ್ದಲ್ಲಿ '😐' ಸಂಕೇತವನ್ನು ಹಾಗೂ ಇಷ್ಟವಾಗದೇ ಇದ್ದಲ್ಲಿ '☹' ಸಂಕೇತವನ್ನು ಗುರುತಿಸಬೇಕು.

**ಶಿಕ್ಷಕರು ಗಮನಿಸಬೇಕಾದ ಅಂಶಗಳು**

✶ ಈ ತರಗತಿಯಲ್ಲಿ ವಿದ್ಯಾರ್ಥಿಗಳು ನಿರ್ದಿಷ್ಟಪಡಿಸಿದ ಕಲಿಕಾ ಫಲಗಳನ್ನು ಗಳಿಸಿಕೊಳ್ಳಲು ನಿರೀಕ್ಷಿಸಲಾಗಿದೆ.

✶ ಅಭ್ಯಾಸ ಪುಸ್ತಕಗಳ ಸಮರ್ಪಕ ಬಳಕೆಯ ಮೂಲಕ ಮಕ್ಕಳು ಈ ಕಲಿಕಾ ಫಲಗಳನ್ನು ಸಾಧಿಸಲು ಶಿಕ್ಷಕರು ಸಹಕರಿಸಲು ತಿಳಿಸಿದೆ.

✶ ಶಿಕ್ಷಕರ ಅಭಿಪ್ರಾಯ ಸೂಚಿಸುವ ಭಾಗದಲ್ಲಿ ಮೂರು ಶ್ರೇಣಿಗಳಾದ 'ಅತ್ಯುತ್ತಮ', 'ಉತ್ತಮ' ಹಾಗೂ 'ಸಾಧಾರಣ' ಶ್ರೇಣಿಗಳನ್ನು ಪ್ರತಿ ಘಟಕದ/ಪಾಠದ ನಂತರ ನೀಡಿರುವ ಪಟ್ಟಿಯಲ್ಲಿ ದಾಖಲಿಸಬೇಕು.

✶ ಇದು ವಿದ್ಯಾರ್ಥಿಗಳು ಕಲಿಕಾ ಫಲಗಳನ್ನು ಗಳಿಸಿಕೊಂಡಿರುವ ಹಂತವನ್ನು ಸೂಚಿಸುತ್ತದೆ.

# 1

# ಭಾಗ - 1

# ವರ್ಣಮಾಲೆ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ / ಅಪೂರ್ಣ ಹೇಳಿಕೆಗಳಿಗೆ ಪ್ರತಿಯೊಂದಕ್ಕೂ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.**

1) ಸ್ವತಂತ್ರವಾಗಿ ಉಚ್ಚಾರ ಮಾಡಲಾಗುವ ಅಕ್ಷರಗಳನ್ನು ಹೀಗೆಂದು ಕರೆಯಲಾಗುವುದು.

ಅ) ಸ್ವರಗಳು ಆ) ವ್ಯಂಜನಗಳು

ಇ) ಯೋಗವಾಹಗಳು ಈ) ಮಹಾಪ್ರಾಣಾಕ್ಷರಗಳು

ಉ. ________________________________________ .

2. ಸ್ವರಗಳ ಸಹಾಯದಿಂದ ಮಾತ್ರ ಉಚ್ಚಾರ ಮಾಡಲಾಗುವ ಅಕ್ಷರಗಳನ್ನು ಹೀಗೆನ್ನುವರು.

ಅ) ಹ್ರಸ್ವಸ್ವರಗಳು ಆ) ದೀರ್ಘಸ್ವರಗಳು

ಇ) ಸುಸ್ವರಗಳು ಈ) ಪ್ಲುತಸ್ವರಗಳು

ಉ. ________________________________________ .

3. ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಗಳು ಇವಾಗಿವೆ.

ಅ) ಹ್ರಸ್ವಸ್ವರಗಳು ಆ) ದೀರ್ಘಸ್ವರಗಳು

ಇ) ಸುಸ್ವರಗಳು ಈ) ಪ್ಲುತಸ್ವರಗಳು

ಉ. ________________________________________ .

4. ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಗಳನ್ನು ಹೀಗೆನ್ನುವರು.

ಅ) ಹ್ರಸ್ವಸ್ವರಗಳು ಆ) ದೀರ್ಘಸ್ವರಗಳು

ಇ) ಸುಸ್ವರಗಳು ಈ) ಪ್ಲುತಸ್ವರಗಳು

ಉ. ________________________________________ .

5. ಕಡಿಮೆ ಉಸಿರಿನಿಂದ ಉಚ್ಚರಿಸಲ್ಪಡುವ ವ್ಯಂಜನಾಕ್ಷರಗಳನ್ನು ಹೀಗೆನ್ನುವರು.

ಅ) ಅವರ್ಗೀಯ ವ್ಯಂಜನಗಳು ಆ) ಅಲ್ಪಪ್ರಾಣಾಕ್ಷರಗಳು

ಇ) ಮಹಾಪ್ರಾಣಾಕ್ಷರಗಳು ಈ) ಅನುನಾಸಿಕಗಳು

ಉ. ____________________

6. ಹೆಚ್ಚು ಉಸಿರಿನಿಂದ ಉಚ್ಚರಿಸಲ್ಪಡುವ ವ್ಯಂಜನಾಕ್ಷರಗಳನ್ನು ಹೀಗೆನ್ನುವರು.

ಅ) ಅನುನಾಸಿಕಗಳು ಆ) ಅಲ್ಪಪ್ರಾಣಾಕ್ಷರಗಳು

ಇ) ಮಹಾಪ್ರಾಣಾಕ್ಷರಗಳು ಈ) ಅವರ್ಗೀಯ ವ್ಯಂಜನಗಳು

ಉ. ____________________

7. ಮೂಗಿನ ಸಹಾಯದಿಂದ ಉಚ್ಚರಿಸಲ್ಪಡುವ ವ್ಯಂಜನಾಕ್ಷರಗಳನ್ನು ಹೀಗೆನ್ನುವರು.

ಅ) ಯೋಗವಾಹಗಳು ಆ) ವ್ಯಂಜನಗಳು

ಇ) ಅಲ್ಪಪ್ರಾಣಾಕ್ಷರಗಳು ಈ) ಅನುನಾಸಿಕಗಳು

ಉ. ____________________

8. ವ್ಯಂಜನಾಕ್ಷರಗಳಿಗೆ ಸ್ವರಾಕ್ಷರಗಳು ಸೇರಿ ಆಗುವ ಅಕ್ಷರಗಳನ್ನು ಹೀಗೆನ್ನುವರು.

ಅ) ಗುಣಿತಾಕ್ಷರಗಳು ಆ) ಸಂಯುಕ್ತಾಕ್ಷರಗಳು

ಇ) ದ್ವಿತ್ವಾಕ್ಷರಗಳು ಈ) ಒತ್ತಕ್ಷರಗಳು

9. ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರಗಳು ಇವಾಗಿವೆ.

ಅ) ಗುಣಿತಾಕ್ಷರಗಳು ಆ) ಸಂಯುಕ್ತಾಕ್ಷರಗಳು

ಇ) ಸಮೂಹಾಕ್ಷರಗಳು ಈ) ಮೂಲಾಕ್ಷರಗಳು

10. ಸ್ವತಂತ್ರವಾದ ಉಚ್ಚಾರವಿಲ್ಲದ, ಸ್ವರದ ಮುಂದೆ ಬಂದಾಗ ಮಾತ್ರ ಉಚ್ಚಾರವಾಗುವ ಅಕ್ಷರಗಳಾದ ಅನುಸ್ವಾರ (0) ಮತ್ತು ವಿಸರ್ಗ (ಃ) ಗಳನ್ನು ಹೀಗೆಂದು ಕರೆಯುವರು.

ಅ) ಮಹಾಪ್ರಾಣಾಕ್ಷರಗಳು ಆ) ವ್ಯಂಜನಗಳು

ಇ) ಅಲ್ಪ ಪ್ರಾಣಾಕ್ಷರಗಳು ಈ) ಯೋಗವಾಹಗಳು

ಉ. ____________________

ಆ. ಕೊಟ್ಟಿರುವ ಮಾದರಿಯಂತೆ ಅನುನಾಸಿಕ ವ್ಯಂಜನಗಳನ್ನು ಬಳಸಿ ಎರಡು ಪದಗಳನ್ನು ಬರೆಯಿರಿ.

| ಮಾದರಿ: ಙ | ವಾಙ್ಮಯ | ದಿಙ್ಮೂಢ |
|---|---|---|
| ನ | | |
| ಣ | | |
| ಞ | | |
| ಮ | | |

ಇ. ಕೊಟ್ಟಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.

| ಮಾದರಿ: ವಸ್ತ್ರ | ವ್ + ಅ, ಸ್ + ತ್ + ರ್ + ಅ |
|---|---|
| ಸಾರಥಿ | |
| ತಂತು | |
| ಪರ್ವ | |
| ದಾಟು | |
| ರಾಷ್ಟ್ರಭಕ್ತಿ | |
| ಶಾಸ್ತ್ರೋಕ್ತ | |
| ವ್ಯಕ್ತಿತ್ವ | |
| ಪ್ರತ್ಯಾಸ್ತ್ರ | |
| ಲಕ್ಷ್ಮೀಶ | |
| ಕೃಷ್ಣ ಪಕ್ಷ | |
| ಧಾರ್ಮಿಕ | |
| ಐಶ್ವರ್ಯ | |
| ಕರ್ಮಯೋಗಿ | |
| ಅಣ್ವಸ್ತ್ರ | |
| ಕೈಕೆ | |
| ದಶರಥ | |
| ಪೂರ್ಣಚಂದ್ರ | |
| ಸತೀಶ್ | |

**ಈ. ಕೊಟ್ಟಿರುವ ಮಾದರಿಯಂತೆ ಬಿಡಿಸಿ ಬರೆದಿರುವ ಅಕ್ಷರಗಳನ್ನು ಕೂಡಿಸಿ ಪದಗಳನ್ನು ಬರೆಯಿರಿ.**

| **ಮಾದರಿ: ಅ,ದ್+ಭ್+ಉ,ತ್+ಅ** | **ಅದ್ಭುತ** |
|---|---|
| ಶ್+ಆ,ಶ್+ವ್+ಅ,ತ್+ಅ | |
| ಪ್+ರ್+ಅ,ತ್+ಇ,ಧ್+ವ್+ಅ ,ನ್+ಇ | |
| ಸ್+ಅ,ದ್+ಅ,ಸ್+ಯ್+ಅ,ತ್+ವ್+ಅ | |
| ಪ್+ರ್+ಅ,ಜ್+ಞ್+ಎ | |
| ಶ್+ಆ,ಸ್+ತ್+ರ್+ಈ+ಯ್+ಅ | |
| ರ್+ಆ,ಷ್+ಟ್+ರ್+ಅ,ಕ್+ಅ,ವ್+ಇ | |
| ಸ್+ಅ,ಮ್+ಸ್+ಕ್+ಋ,ತ್+ಅ | |
| ಸ್+ಅ,ರ್+ಕ್+ಆ,ರ್+ಅ | |
| ನ್+ಇ,ರ್+ದ್+ಏ,ಶ್+ಅ,ನ್+ಅ | |
| ಸ್+ಅ,ತ್+ಈ,ಶ್+ಅ | |
| ಅ,ಭ್+ಇ,ನ್+ಅ,ನ್+ದ್+ಅ,ನ್ | |
| ಧ್+ರ್+ಉ,ವ್+ಅ,ಜ್+ಯ್+ಓ,ತ್+ಇ | |
| ಶ್+ರ್+ಈ,ಕ್+ನ್+ಠ್+ಅ | |
| ಪ್+ರ್+ಆ,ಧ್+ಆ,ನ್+ಯ್+ಅ | |

**ಉ. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ಸಜಾತೀಯ ಸಂಯುಕ್ತಾಕ್ಷರ ಹಾಗೂ ವಿಜಾತೀಯ ಸಂಯುಕ್ತಾಕ್ಷರಗಳನ್ನೊಳಗೊಂಡ ಪದಗಳನ್ನು ಆರಿಸಿ ಬರೆಯಿರಿ.**

ಡಾ॥ ಸರ್ವೆಪಲ್ಲಿ ರಾಧಾಕೃಷ್ಣನ್ ಅವರು ಶಿಕ್ಷಣ ಇಲಾಖೆಯ ಉಪಸಹಾಯಕ ಇನ್ಸ್‌ಪೆಕ್ಟರ್ ಆಗಿ ಮದ್ರಾಸಿನಲ್ಲಿ ಮೊದಲ ಸೇವೆಯನ್ನು ಆರಂಭಿಸಿದರು. ನಂತರ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜು, ಸಯ್ಯದ್‌ಪೇಟೆಯ ಟೀಚರ್ಸ್ ಟ್ರೈನಿಂಗ್ ಕಾಲೇಜು, ಆಂಧ್ರದ ಅನಂತಪುರ ಹಾಗೂ ರಾಜಮಂಡ್ರಿಯ ಸರ್ಕಾರಿ ಕಲಾ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದ ಉಪಪ್ರಾಧ್ಯಾಪಕರಾಗಿ ಹಾಗೂ ಕೋಲ್ಕತ್ತಾದಲ್ಲಿ ಪ್ರಾಧ್ಯಾಪಕರಾಗಿ ಸ್ಮರಣೀಯ ಸೇವೆಸಲ್ಲಿಸಿದರು. ಇದಲ್ಲದೆ ಆಂಧ್ರ, ದೆಹಲಿ, ಬನಾರಸ್ ವಿಶ್ವವಿದ್ಯಾನಿಲಯಗಳಲ್ಲಿ ಕುಲಪತಿಯಾಗಿ ಸೇವೆಸಲ್ಲಿಸಿ, ಅವುಗಳ ಪುರೋಭಿವೃದ್ಧಿಗೆ ಶ್ರಮಿಸಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲೂ ಸಂದರ್ಶಕ

ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ರಾಧಾಕೃಷ್ಣನ್ ಅವರ ಬೋಧನಾ ಶೈಲಿ, ನಿರರ್ಗಳತೆ, ವಿಷಯದ ಮೇಲಿನ ಪ್ರಭುತ್ವ ವಿದ್ಯಾರ್ಥಿಗಳನ್ನು ಬಹುಬೇಗ ಆಕರ್ಷಿಸಿತು. ತಮ್ಮ ಪ್ರಾಧ್ಯಾಪಕತ್ವವನ್ನು ಯಾವಾಗಲೆಂದರೆ ಆವಾಗ ಕಳಚಿ, ಅವರು ಏರುಜವ್ವನದ ಯುವಕರಂತೆ ಹಾಸ್ಯ ವಿನೋದಗಳಲ್ಲಿ ತೊಡಗುತ್ತಿದ್ದರು. ಶಿಕ್ಷಕನೊಬ್ಬನ ಗೌರವವು ಬೋಧನೆಯಿಂದಲೇ ವೃದ್ಧಿಸುವುದಾದರೂ ವ್ಯಕ್ತಿತ್ವ, ಸೌಜನ್ಯ, ಸ್ನೇಹಶೀಲತೆಯಿಂದ ಎಲ್ಲರ ಪ್ರೀತಿ ವಿಶ್ವಾಸವನ್ನು ಗಳಿಸುವುದು ಹೇಗೆ ಎಂಬುದಕ್ಕೆ ರಾಧಾಕೃಷ್ಣನ್‌ರವರು ಉದಾಹರಣೆಯಾಗಿದ್ದರು.

| **ಸಜಾತೀಯ ಸಂಯುಕ್ತಾಕ್ಷರಗಳನ್ನೊಳಗೊಂಡ ಪದಗಳು** | | **ವಿಜಾತೀಯ ಸಂಯುಕ್ತಾಕ್ಷರಗಳನ್ನೊಳಗೊಂಡ ಪದಗಳು** | |
|---|---|---|---|
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |

**ಊ.ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕಿರುವ ಸಂಬಂಧವನ್ನು ಗುರುತಿಸಿ, ಮಾದರಿಯಂತೆ ನಾಲ್ಕನೆಯ ಪದವನ್ನುಬರೆಯಿರಿ.**

| | | | | |
|---|---|---|---|---|
| **ಮಾದರಿ:** | ಕದ | : ಕಂದ | : : ದಡ | : ದಂಡ |
| 1. | ಗುಡಿ | : ಗುಂಡಿ | : : ಸಜೆ | : ______ |
| 2. | ಕ್ಷಮ | : ಕ್ಷಾಮ | : : ನಡು | : ______ |
| 3. | ಭಾಗ | : ಭಾಗ್ಯ | : : ಧನ | : ______ |
| 4. | ಭರ | : ಭಾರ | : : ಜಗ | : ______ |
| 5. | ಹರ | : ಹಾರ | : : ವರ | : ______ |
| 6. | ತುಟಿ | : ತುಂಟಿ | : : ಚಿತೆ | : ______ |
| 7. | ಖ್,ಛ್ | : ಮಹಾಪ್ರಾಣಗಳು | : : ನ್, ಞ್ | : ______ |
| 8. | ಯೋಗವಾಹಗಳು | : 2 | : : ಹ್ರಸ್ವ ಸ್ವರಗಳು | : ______ |
| 9. | 'ಕ' ವರ್ಗ | : ಙ್ | : : 'ಪ' ವರ್ಗ | : ______ |
| 10. | ಸಜ್ಜನ | : ಸಜಾತಿ ಸಂಯುಕ್ತಾಕ್ಷರ | : : ಆರೋಗ್ಯ | : ______ |

**ವರ್ಣೋತ್ಪತ್ತಿ ಸ್ಥಾನಗಳು**

ವರ್ಣೋತ್ಪತ್ತಿ ಸ್ಥಾನಗಳು:

ಕಂಠ್ಯ – ಕ್, ಖ್, ಗ್, ಘ್, ಙ್, ಅ, ಆ, ಹ್, ಃ

ತಾಲವ್ಯ – ಚ್, ಛ್, ಜ್, ಝ್, ಞ್, ಇ, ಈ, ಯ್, ಶ್

ಮೂರ್ಧನ್ಯ – ಟ್, ಠ್, ಡ್, ಢ್, ಣ್, ಋ, ರ್, ಷ್

ದಂತ್ಯ – ತ್, ಥ್, ದ್, ಧ್, ನ್, ಲ್, ಸ್

ಓಷ್ಠ್ಯ – ಉ, ಊ, ಪ್, ಫ್, ಬ್, ಭ್, ಮ್

ಅನುನಾಸಿಕ – ಙ್, ಞ್, ಣ್, ನ್, ಮ್

ಕಂಠ ತಾಲವ್ಯ – ಎ, ಏ, ಐ

ಕಂಠೌಷ್ಠ್ಯ – ಒ, ಓ, ಔ

ದಂತೌಷ್ಠ್ಯ – ವ್

**ಋ. ಹೊಂದಿಸಿ ಬರೆಯಿರಿ.**

| ಅ ಪಟ್ಟಿ | ಬ ಪಟ್ಟಿ | ಉತ್ತರಗಳು |
|---|---|---|
| 1. ವಿಸರ್ಗಾಕ್ಷರವಿರುವ ಪದ | ಐ, ಔ | |
| 2. ಅನುಸ್ವಾರಾಕ್ಷರವಿರುವ ಪದ | 13 | |
| 3. ಸ್ವರಾಕ್ಷರಗಳ ಸಂಖ್ಯೆ | ಒತ್ತಕ್ಷರ | |
| 4. ವಿಜಾತೀಯ ಒತ್ತಕ್ಷರವಿರುವ ಪದ | ದುಃಖ | |
| 5. ಸಜಾತೀಯ ಒತ್ತಕ್ಷರವಿರುವ ಪದ | ಅಂಜೂರ | |
| 6. ಸಂಯುಕ್ತಾಕ್ಷರ | ಪ್ರಶ್ನೆ | |
| 7. 'ಟ'ವರ್ಗದ ಅನುನಾಸಿಕಾಕ್ಷರ | ಅಣ್ಣಾ೩ | |
| 8. ಪ್ಲುತಸ್ವರವಿರುವ ಪದ | ಖ್ಘ್ಛ್ಝ್ಠ್ಢ್ಥ್ಧ್ಫ್ಭ್ | |
| 9. ಸಂಧ್ಯಕ್ಷರಗಳು | ಣ್ | |
| 10. ಮಹಾಪ್ರಾಣಾಕ್ಷರಗಳು | ಕಜ್ಜಾಯ | |

ಅನುಸ್ವಾರವು ಪದದ ನಡುವೆ ಬಂದಾಗ ಮುಂದೆ ಯಾವ ವರ್ಗೀಯ ವ್ಯಂಜನ ಇರುತ್ತದೆಯೋ ಅದೇ ವರ್ಗದ ಅನುನಾಸಿಕ ಅಕ್ಷರದಂತೆ ಉಚ್ಚಾರಣೆಯಾಗುತ್ತದೆ.

ಅಂಕ – ಅ+ಙ್+ಕ ಅಂಚೆ – ಅ+ಞ್+ಚೆ

ಅಂಟು – ಅ+ಣ್+ಟು ಅಂದ – ಅ+ನ್+ದ ಅಂಬು – ಅ+ಮ್+ಬು

**ವಿದ್ಯಾರ್ಥಿಯ ಸ್ವ–ಮೌಲ್ಯಮಾಪನ**

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ಸ್ವರಗಳು, ವ್ಯಂಜನಗಳು ಹಾಗೂ ಯೋಗವಾಹಗಳನ್ನು ಗುರುತಿಸಬಲ್ಲೇ | | | |
| 2 | ಗುಣಿತಾಕ್ಷರಗಳನ್ನು ಬಿಡಿಸಿ ಮತ್ತು ಸೇರಿಸಿ ಬರೆಯಬಲ್ಲೇ | | | |
| 3 | ಸಜಾತೀಯ ಹಾಗೂ ವಿಜಾತೀಯ ಸಂಯುಕ್ತಾಕ್ಷರಗಳನ್ನು ಗುರುತಿಸಬಲ್ಲೇ | | | |

**ಶಿಕ್ಷಕರ ಅಭಿಪ್ರಾಯ**

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 2 ನಾಮಪದಗಳು

ಅ. ಕೊಟ್ಟಿರುವ ಚಿತ್ರಗಳನ್ನು ಹೆಸರಿಸಿ ವಸ್ತುವಾಚಕದ ಪ್ರಕಾರವನ್ನು ಬರೆಯಿರಿ.

**ಮಾದರಿ:**



ಸೈನಿಕ
ಅನ್ವರ್ಥನಾಮ



______________________

______________________



______________________

______________________



______________________

______________________



______________________

______________________



______________________

______________________







TAKING
CHARGE




gettyimages







______________________________    ______________________________

______________________________    ______________________________

**ಆ. ಕೊಟ್ಟಿರುವ ಪ್ರಶ್ನೆಗಳಿಗೆ / ಅಪೂರ್ಣ ಹೇಳಿಕೆಗಳಿಗೆ ಪ್ರತಿಯೊಂದಕ್ಕೂ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.**

1. ವಸ್ತುಗಳ ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ ವಿಶೇಷಣಗಳನ್ನು ಹೀಗೆನ್ನುವರು.

   ಅ) ಗುಣವಾಚಕಗಳು　　ಆ) ಸಂಖ್ಯಾವಾಚಕಗಳು

   ಇ) ವಸ್ತುವಾಚಕಗಳು　　ಈ) ಭಾವನಾಮಗಳು

ಉ. ______________________________________________

2. ಕೆಳಗಿನವುಗಳಲ್ಲಿ ಭಾವನಾಮಕ್ಕೆ ಉದಾಹರಣೆಯಾದ ಪದ ಇದಾಗಿದೆ.

   ಅ) ಕಿವುಡ　　ಆ) ಅಷ್ಟು

   ಇ) ಬಿಳುಪು　　ಈ) ಎಂತಹ

ಉ. ______________________________________________

3. ನಾಮಪದಗಳ ಸ್ಥಾನದಲ್ಲಿ ಅವುಗಳ ಬದಲಾಗಿ ಈ ಶಬ್ದಗಳನ್ನು ಬಳಸಲಾಗುತ್ತದೆ.

   ಅ) ಹೆಂಗಸು, ಹುಡುಗ　　ಆ) ಪೂರ್ವ, ಪಶ್ಚಿಮ

   ಇ) ಅಷ್ಟು, ಅನಿತು　　ಈ) ಅವನು, ನೀನು

ಉ. ______________________________________________

4. “ಯಕ್ಷಗಾನದಲ್ಲಿ ತೆಂಕುತಿಟ್ಟು, ಬಡಗುತಿಟ್ಟು, ಬಡಬಡಗುತಿಟ್ಟು ಎಂಬ ಮೂರು ಪ್ರಕಾರಗಳಿವೆ.” ವಾಕ್ಯದಲ್ಲಿರುವ ಸಂಖ್ಯಾವಾಚಕ ಪದ ಇದಾಗಿದೆ.

ಅ) ತೆಂಕುತಿಟ್ಟು　　ಆ) ಮೂರು

ಇ) ಎಂಬ　　ಈ) ಪ್ರಕಾರ

ಉ. ______________________________

5. "ಬೀರಣ್ಣ ತನ್ನ ಮೂಡಣ ದಿಕ್ಕಿಗಿರುವ ಹೊಲವನ್ನು ಈರಣ್ಣನಿಗೆ ಮಾರಿದ್ದನು." ವಾಕ್ಯದಲ್ಲಿ ಮೂಡಣ ಎಂಬ ಪದ ನಾಮಪದದ ಈ ಪ್ರಕಾರಕ್ಕೆ ಸೇರಿದೆ.

ಅ) ಸಂಖ್ಯಾವಾಚಕ　　ಆ) ಪ್ರಕಾರ ವಾಚಕ

ಇ) ದಿಗ್ವಾಚಕ　　ಈ) ವಸ್ತುವಾಚಕ

ಉ. ______________________________

## ಇ. ಕೊಟ್ಟಿರುವ ನಾಮಪದಗಳಿಗೆ ಸೂಕ್ತ ಗುಣವಾಚಕಗಳನ್ನು ಸೇರಿಸಿ ಬರೆಯಿರಿ.

| ಮಾದರಿ: ಗುಲಾಬಿ | ಕೆಂಪು ಗುಲಾಬಿ | ಬೆರಳು | |
|---|---|---|---|
| ಕೂದಲು | | ಆಕಾಶ | |
| ಮೋಡ | | ಬೆಳಕು | |
| ಮಂಟಪ | | ಬೆಂಗಳೂರು | |
| ನೆರಳು | | ಸೂರ್ಯ | |
| ಸಮುದ್ರ | | ತೋರಣ | |
| ಕೊಡೆ | | ಮುಗಿಲು | |

## ಈ. ಕೊಟ್ಟಿರುವ ವೃತ್ತದಲ್ಲಿನ ಸರ್ವನಾಮ ಪದಗಳನ್ನು ವಿಂಗಡಿಸಿ ಬರೆಯಿರಿ.

| ಪುರುಷಾರ್ಥಕ ಸರ್ವನಾಮ | | | ಆತ್ಮಾರ್ಥಕ ಸರ್ವನಾಮ | ಪ್ರಶ್ನಾರ್ಥಕ ಸರ್ವನಾಮ | ನಾನು, ಅವನು ಇದು, ಏನು, ತಾನು, ಇವಳು, ನಾವು, ಎಲ್ಲಿ, ಇವನು, ಯಾರು, ನೀವು, ಇವರು, ಯಾವುದು, ಅವರು, ಅವು, ತಾವು, ನೀನು, ಅವಳು ಯಾವಾಗ, ಅದು, ಇವು. |
|---|---|---|---|---|---|
| ಉತ್ತಮ ಪುರುಷ | ಮಧ್ಯಮ ಪುರುಷ | ಪ್ರಥಮ ಪುರುಷ | | | |
| | | | | | |

**ಉ. ಸೂಕ್ತ ಪುರುಷಾರ್ಥಕ ಸರ್ವನಾಮಗಳನ್ನು ಬಳಸಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿರಿ.**

**ಮಾದರಿ: ನಾವು ಎಲ್ಲರೂ ಉತ್ತಮ ವಿದ್ಯಾರ್ಥಿಗಳು.**

1. ________ ಹುಲ್ಲನ್ನು ಮೇಯುತ್ತಿದೆ.
2. ________ ಊರು ಮೈಸೂರು
3. ________ ಚೆನ್ನಾಗಿ ಹಾಡುತ್ತೇನೆ
4. ________ ಅದ್ಭುತ ಗಾಯಕಿ
5. ________ ಬಹಳ ಬುದ್ಧಿವಂತನಂತೆ ವರ್ತಿಸಬೇಡ
6. ________ ಭವ್ಯ ಭಾರತದ ಪ್ರಜೆಗಳು
7. ________ ಅತ್ಯಂತ ಗಂಭೀರೆಯಾಗಿದ್ದಳು
8. ________ ಕರ್ನಾಟಕದ ರಾಜ್ಯಪಾಲರು
9. ________ ಸುಂದರ ಹೂವುಗಳು
10. ________ ದುಂಡಾಗಿ ಬರೆಯಬಲ್ಲೆ

**ಊ. ಗೆರೆ ಎಳೆದ ಪದಗಳನ್ನು ಗಮನಿಸಿ ಸೂಕ್ತ ಪ್ರಶ್ನಾರ್ಥಕ ಸರ್ವನಾಮಗಳನ್ನು ಬಳಸಿ, ಪ್ರಶ್ನೆಗಳನ್ನು ರಚಿಸಿ.**

**ಮಾದರಿ: ಕರ್ನಾಟಕದ ರಾಜಧಾನಿ ಬೆಂಗಳೂರು.**

ಕರ್ನಾಟಕದ ರಾಜಧಾನಿ ಯಾವುದು?

**1. ಮಾನವನ ದೇಹದಲ್ಲಿ 206 ಮೂಳೆಗಳಿವೆ.**

**ಉ.** ________________________________________ .

**2. ಚಕ್ರಪಾಣಿ ಎಂದರೆ ಕೃಷ್ಣ.**

**ಉ.** ________________________________________ .

**3. ಪಂಪನು ಅರಿಕೇಸರಿಯ ಆಸ್ಥಾನದಲ್ಲಿ ಕವಿಯಾಗಿದ್ದನು.**

**ಉ.** ________________________________________ .

**4. 'ಶ್ರೀರಾಮಾಶ್ವಮೇಧಂ' ಮುದ್ದಣನು ಬರೆದ ಕೃತಿ.**

**ಉ.** ________________________________________ .

**5. ಮಾಸ್ತಿಯವರ ಚಿಕವೀರ ರಾಜೇಂದ್ರ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ.**

**ಉ.** ________________________________________ .

**6. ಚಂದ್ರಶೇಖರ ಕಂಬಾರರು ಕನ್ನಡದ 8ನೆಯ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.**

**ಉ.** ________________________________________ .

**7. ಮೈಸೂರು ರಾಜ್ಯವು 1973ರಲ್ಲಿ ಕರ್ನಾಟಕ ಎಂಬ ಹೆಸರು ಪಡೆಯಿತು.**

**ಉ.** ________________________________________ .

## ಎ. ಹೊಂದಿಸಿ ಬರೆಯಿರಿ.

| ಅ ಪಟ್ಟಿ | ಬ ಪಟ್ಟಿ | ಉತ್ತರಗಳು |
|---|---|---|
| 1. ಮೂವರು | ರೂಢನಾಮ | ________ |
| 2. ಕೆಲವು | ದಿಗ್ವಾಚಕ | ________ |
| 3. ಹುಬ್ಬಳ್ಳಿ | ಸಂಖ್ಯಾವಾಚಕ | ________ |
| 4. ಯೋಗಿ | ಪರಿಮಾಣವಾಚಕ | ________ |
| 5. ಆಚೆ | ಅಂಕಿತನಾಮ | ________ |
| | ಅನ್ವರ್ಥನಾಮ | ________ |

## ಐ. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ಸೂಕ್ತ ಪ್ರಶ್ನೆಗಳನ್ನು ರಚಿಸಿ.

ಸಮುದ್ರ ತೀರದಲ್ಲಿದ್ದ ಒಂದು ಮರದಲ್ಲಿ ಬಕ ದಂಪತಿಗಳಿದ್ದವು. ಅವುಗಳ ಮೊಟ್ಟೆಗಳನ್ನು, ಆ ಮರದ ಪಕ್ಕದ ಹುತ್ತದಲ್ಲಿ ವಾಸಮಾಡುವ ಒಂದು ಸರ್ಪ ಮರವನ್ನು ಹತ್ತಿ ತಿನ್ನುತ್ತಿತ್ತು. ದುಃಖದಿಂದ ಕೂಡಿದ ಬಕ ಏನು ಮಾಡಲೂ ತೋಚದಂತಿತ್ತು.

ಒಂದು ದಿನ ಬಕ ಸಮುದ್ರ ತೀರದಲ್ಲಿ ನಿಂತು ಇದೇ ಯೋಚನೆ ಮಾಡುತ್ತಿತ್ತು. ಅದನ್ನು ಕಂಡ ಒಂದು ಏಡಿ "ಏನಣ್ಣಾ, ನೀನು ಈ ದಿನ ಆಹಾರದ ಯೋಚನೆಯನ್ನು ಮಾಡದೆ, ವ್ಯಾಪಾರ ಮಾಡುವವರಂತೆ ಕಣ್ಣನ್ನು ಭದ್ರವಾಗಿ ಮುಚ್ಚಿಕೊಂಡಿರುವ ಕಾರಣವಾವುದು?" ಎಂದು ಕೇಳಿತು.

"ನನಗೆ ಮನಸ್ಸಿನ ದುಃಖವೇ ಅತಿಯಾಗಿರುವುದರಿಂದ, ಆಹಾರಕ್ಕಾಗಿ ಹೇಗೆ ಚಿಂತೆ ಮಾಡಲಿ?" ಎಂದು ಬಕ ಹೇಳಿತು. "ಅದೇನು ಕಾರಣ?" ಎಂದು ಏಡಿ ಕೇಳಿದಾಗ, ಬಕ ಈ ಸಂಗತಿಯನ್ನೆಲ್ಲಾ ತಿಳಿಸಿತು. ಅದನ್ನೆಲ್ಲಾ ಕೇಳಿಕೊಂಡ ಏಡಿ ಹೀಗೆ ಹೇಳಿತು. "ಹಾಗಾದರೆ ಸರ್ಪವನ್ನು ಕೊಲ್ಲುವಂತಹ ಉಪಾಯವೊಂದನ್ನು ನಾನು ಹೇಳುತ್ತೇನೆ. ಅದು ಏನೆಂದರೆ ನೀನು ಮಾಂಸದ ತುಂಡುಗಳನ್ನು ತಂದು ಮುಂಗುಸಿಗಳು ಓಡಾಡುವ ಸ್ಥಳದಿಂದ ಹುತ್ತದವರೆಗೂ ಸಾಲಾಗಿ ಹಾಕು, ಮುಂಗುಸಿಗಳು ಮಾಂಸದ ಆಸೆಯಿಂದ ಸರ್ಪವನ್ನು ತಿನ್ನುತ್ತವೆ."

ಅದಕ್ಕೆ ಒಪ್ಪಿದ ಆ ಬಕ ಆ ಕೂಡಲೇ ಹೋಗಿ ಮೀನುಗಳನ್ನು ಕೊಂದು ತಂದು, ಏಡಿ ಹೇಳಿದಂತೆ ಅವುಗಳನ್ನು ಸಾಲಾಗಿ ಹಾಕಿತು. ಅದನ್ನು ಕಂಡು ಮುಂಗುಸಿಗಳು ಮೀನಿನ ಮಾಂಸವನ್ನು ತಿನ್ನುತ್ತಾ ಬಂದು ಹುತ್ತವನ್ನು ಸೇರಿದವು. ಅದೇ ವೇಳೆಯಲ್ಲಿ, ಹುತ್ತದಿಂದ ಹೊರಗೆ ಬಂದ ಸರ್ಪ ಮರವನ್ನು ಹತ್ತುವುದನ್ನು ಕಂಡು ಮುಂಗುಸಿಗಳು ಅದನ್ನು ತುಂಡುತುಂಡು ಮಾಡಿ ತಿಂದು ಹಾಕಿದವು. ತನ್ನ ಮೊಟ್ಟೆಗಳು ಉಳಿದುಕೊಂಡಿದ್ದರಿಂದ ಬಕವು ಸಂತೋಷಗೊಂಡು ಏಡಿಗೆ ತನ್ನ ಕೃತಜ್ಞತೆಯನ್ನು ಸಲ್ಲಿಸಿತು.

**ಪ್ರಶ್ನೆಗಳು:**

1.
2.
3.
4.
5.
6.
7.
8.
9.
10.

ಏ. ಕೊಟ್ಟಿರುವ ಚೌಕದಲ್ಲಿ ಕೆಲವು ನಾಮವಾಚಕಗಳಿವೆ. ಅವುಗಳಲ್ಲಿ ಹತ್ತು ಬಗೆಯ ನಾಮವಾಚಕ ಪದಗಳನ್ನು ಪತ್ತೆಹಚ್ಚಿ ಬರೆಯಿರಿ.

| | | | | | | | | | | |
|---|---|---|---|---|---|---|---|---|---|---|
| ಅಂ | ರ | ಕ | ಹೆ | ಖಿ | ತೆ | ಐ | ಉ | ಬ್ದ | ದಿ | ಅ |
| ತ | ಶ | ಪು | ವ | ವ್ರೂ | ಚ | ಔ | ಚೇ | ಹೆ | ಳ | ವ |
| ಹ | ದಿ | ಡು | ತೆಂ | ಋ | ಯೋ | ಠ | ನಾ | ತ | ಗ | ರು |
| ಖಿ | ಪ | ಅ | ಕ | ನಾ‍ರ್ | ಟ | ಕ | ಇ | ಚ | ತ್ತ | ಪ್ರೀ |
| ಆ | ಹ | ಲೆ | ಣ | ವಾ | ಏ | ರ | ಷ್ಟು | ತಿ | ನೀ | ವು |
| ರು | ಗ್ರಾ | ಳೆ | ಠ | ಬೆ | ಳ | ಮ | ನೌ | ಯ | ಸ | ಗೇ |
| ನೂ | ಳಿ | ಹೋ | ಯ | ಟ್ಟ | ನೆ | ಣು | ದ | ಮ್ಮ | ನೆ | ಪ್ರ |
| ಕ | ಭಾರ್ | ಕ್ಷು | ಹಿ | ಬೀ | ಯ | ಸ್ಮೂ | ಥೇ | ನ್ನ | ಝು | ಆ |
| ಮೋ | ಡು | ಸಿ | ರೋ | ಸ್ಮ | ಗ | ಮ್ಯ | ಬ | ಡ | ರ | ನೆ |
| ಪಾ | ಹೆ | ಮ್ಮ | ರ | ಮೂ | ಡ | ಣ | ಕ್ರೊ | ಶಿ | ಕ್ಷ | ಕ |

| ಮಾದರಿ: ದಿಗ್ವಾಚಕ | ತೆಂಕಣ | ಸಂಖ್ಯೇಯವಾಚಕ | ಏಳನೆಯ |
|---|---|---|---|
| ಭಾವನಾಮ | | ಪ್ರಕಾರವಾಚಕ | |
| ಗುಣವಾಚಕ | | ರೂಢನಾಮ | |
| ಸಂಖ್ಯಾವಾಚಕ | | ಅಂಕಿತನಾಮ | |
| ಸರ್ವನಾಮ | | ಅನ್ವರ್ಥನಾಮ | |
| ಪರಿಮಾಣವಾಚಕ | | ದಿಗ್ವಾಚಕ | |

**ಕನ್ನಡದ ಪ್ರಥಮರನ್ನು ಹೆಸರಿಸಿ.**

| ಮಾದರಿ: ಕನ್ನಡದ ಆದಿಕವಿ | ಪಂಪ |
|---|---|
| • ಕನ್ನಡದ ಮೊದಲ ಕವಯಿತ್ರಿ | |
| • ಕನ್ನಡದ ಮೊದಲ ಮಹಮದೀಯ ಕವಿ | |
| • ಕನ್ನಡದ ಮೊದಲ ವಚನಕಾರ | |
| • ಕನ್ನಡದಲ್ಲಿ ಮೊದಲ ಕಥೆಗಾರ | |
| • ಕನ್ನಡ ಸಾಹಿತ್ಯ ಪರಿಷತ್ತಿನ ಮೊದಲ ಅಧ್ಯಕ್ಷರು | |
| • ಕನ್ನಡ ದಾಸಸಾಹಿತ್ಯದ ಮೊದಲಿಗ | |
| • ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ | |
| • ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ | |
| • ಕನ್ನಡದ ಮೊದಲ ಕಾದಂಬರಿಕಾರ | |

## ವಿದ್ಯಾರ್ಥಿಯ ಸ್ವ-ಮೌಲ್ಯಮಾಪನ

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ವಸ್ತು ವಾಚಕ ನಾಮಪದಗಳನ್ನು ಗುರುತಿಸಬಲ್ಲೇ | | | |
| 2 | ನಾಮಪದದ ಉದಾಹರಣೆಗಳನ್ನು ಗುರುತಿಸಬಲ್ಲೇ | | | |
| 3 | ನಾಮ ಪದದ ವಿಧಗಳನ್ನು ಹೆಸರಿಸಬಲ್ಲೇ | | | |

**ಶಿಕ್ಷಕರ ಅಭಿಪ್ರಾಯ**

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 3 ವಿಭಕ್ತಿ ಪ್ರತ್ಯಯಗಳು

## ಅ. ಹೊಂದಿಸಿ ಬರೆಯಿರಿ.

| ಅ ಪಟ್ಟಿ | ಬ ಪಟ್ಟಿ | ಉತ್ತರಗಳು |
|---|---|---|
| 1. ಪಂಚಮಿ | ಅಧಿಕರಣ | |
| 2. ದ್ವಿತೀಯ | ಕರ್ತೃ | |
| 3. ಸಪ್ತಮೀ | ಅಪಾದಾನ | |
| 4. ತೃತೀಯ | ಕರ್ಮ | |
| 5. ಪ್ರಥಮ | ಕರಣ | |
| | ಸಂಪ್ರದಾನ | |

ಕಾರಕಗಳು: ಕ್ರಿಯೆ ನಡೆಯಲು ಕಾರಣವಾಗುವುದೇ ಕಾರಕ. ಕಾರಕವು ನಾಮಪದ ಮತ್ತು ಕ್ರಿಯಾಪದಗಳಿಗಿರುವ ಸಂಬಂಧವನ್ನು ಸೂಚಿಸುತ್ತದೆ.

## ಆ. ಹಳಗನ್ನಡ ಮತ್ತು ಹೊಸಗನ್ನಡ ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಬರೆಯಿರಿ.

ಉ ಒಳ್
ಅ ಇಂ ಇಕೆ
ದೆಸೆಯಿಂದ ಅನ್ನು
ಇಗೆ ಅಲ್ಲಿ ಮ್
ಅತ್ತಣಿಂ ಅತ್ತಣಿಂದಂ
ಗೆ ಇಂದ ಅಂ

| ಹಳಗನ್ನಡ | | ಹೊಸಗನ್ನಡ | |
|---|---|---|---|
| | | | |
| | | | |
| | | | |
| | | | |

ಹಳೆಗನ್ನಡ ವಿಭಕ್ತಿ ಪ್ರತ್ಯಯ ಕುರಿತಾದ ಭಟ್ಟಾಕಳಂಕನ ಸೂತ್ರ: ಮಮಿಂಗೆತ್ತಣಿಮದೊಳ್

## ಇ. ಕೊಟ್ಟಿರುವ ನಾಮಪ್ರಕೃತಿಗಳಿಗೆ ಪ್ರತ್ಯಯವನ್ನು ಕೂಡಿಸಿ ಬರೆಯಿರಿ.

| ಮಾದರಿ: ಉರ್ವಿ + ಒಳ್ | ಉರ್ವಿಯೊಳ್ | ಪುಸ್ತಕ + ಕೆ | |
|---|---|---|---|
| ಅಸ್ತ್ರ + ಮ್ | | ಸರ್ವಪ್ರಕಾರ + ಇಂದಂ | |
| ನುಡಿ + ಅಂ | | ಕಜ್ಜ + ಮ್ | |
| ನರಂ + ಗೆ | | ಬನ + ಒಳ್ | |
| ದೆಸೆ + ಒಳ್ | | ಪೂವು + ಅ | |
| ಭಂಡಾರ + ಅ | | ಕಾಲ + ಅಂ | |

**ಈ. ನಿಮ್ಮ ಪಠ್ಯದಲ್ಲಿರುವ ಯಾವುದಾದರೂ ಹಳಗನ್ನಡ ಗದ್ಯ / ಪದ್ಯದಲ್ಲಿರುವ ನಾಮಪದಗಳನ್ನು ಗುರುತಿಸಿ. ಅವುಗಳಲ್ಲಿರುವ ಪದ ಮತ್ತು ಪ್ರತ್ಯಯಗಳನ್ನು ಪ್ರತ್ಯೇಕಿಸಿ.**

| | | | |
|---|---|---|---|
| | | | |
| | | | |
| | | | |
| | | | |
| | | | |

**ಉ. ಗೆರೆ ಎಳೆದಿರುವ ವಿಭಕ್ತಿ ಪ್ರತ್ಯಯವು ಯಾವ ಕಾರಕಾರ್ಥದಲ್ಲಿ ಬಳಕೆಯಾಗಿದೆ ಎಂಬುದನ್ನು ಗುರುತಿಸಿ ಬರೆಯಿರಿ.**

| ವಾಕ್ಯಗಳು | ಕಾರಕಾರ್ಥ |
|---|---|
| **ಮಾದರಿ: ತಿಮಿಂಗಿಲಗಳು ಸಮುದ್ರದಲ್ಲಿ ವಾಸಿಸುತ್ತವೆ.** | **ಅಧಿಕರಣ** |
| 1. ಕಾದ ಬಿಸಿ ನೀರು ಮನೆಯನ್ನು ಸುಡುವುದೇ? | |
| 2. ಚಂದ್ರವೇಗಂ ಸಿದ್ಧಕೂಟಕ್ಕೆ ವಂದನಾಭಕ್ತಿಗೆ ಪೋದನು. | |
| 3. ಕೋಪವು ಎಂತಹವರಲ್ಲಿಯೂ ವಿವೇಕವುಂಟಾಗಲು ಅವಕಾಶ ನೀಡುವುದಿಲ್ಲ. | |
| 4. ಜ್ವರದ ಮೊದಲಲ್ಲಿ ಹಾಲಂ ಕುಡಿದೊಡಂ ವಿಷವಹುದೆಂದು ಬುದ್ಧಿವಂತರ್ ಪೇಳ್ವರ್. | |
| 5. ನಾಳೆ ನಾಂ ನಾಲ್ವರ್ ದಿಗಂಬರ ರೂಪಗೊಂಡು ನಿನ್ನ ಮನೆಗೆ ಬಂದಪ್ಪೆವು. | |
| 6. ಭದ್ರಪುರವೆಂಬ ಪುರದೊಳ್ ದಾರಿದ್ರ್ಯಭೂತಿಯೆಂಬ ಪರದನಿರ್ಪಂ | |
| 7. ಇಂತಪ್ಪುದನಾಂ ಬಗೆಯದೆ ಸಂಜೀವಕನಂ ಕೊಂದೀ ಜಗದೊಳ್ ನಿಂದಿಸಿಕೊಂಡೆಂ | |
| 8. ನಾಗಶರ್ಮನು ಯಾಚಕ ವೃತ್ತಿಯಿಂದ ಒಂದು ಕೊಡ ಹುರಿಹಿಟ್ಟನ್ನು ಸಂಪಾದಿಸಿದನು. | |
| 9. ಅಷ್ಟೊಂದು ದೊಡ್ಡ ಸಂಭ್ರಮದಲ್ಲಿ ನಾರಾಯಣನಿಗೆ ಧರ್ಮರಾಜನು ಅಗ್ರಪೂಜೆ ನೀಡಿದನು. | |
| 10. ಅರ್ಜುನನು ಪಾಶುಪತಾಸ್ತ್ರವನ್ನು ಪ್ರಯೋಗಿಸಲು ದಿಕ್ಕುಗಳ ಸಮೂಹವು ನಡುಗಿತು? | |

**ಊ. ಕೊಟ್ಟಿರುವ ನಾಮಪ್ರಕೃತಿಗೆ ಏಳು ವಿಭಕ್ತಿ ಪ್ರತ್ಯಯಗಳನ್ನು ಬಳಸಿ ಮಾದರಿಯಂತೆ ವಾಕ್ಯ ರಚಿಸಿರಿ.**

**ಮಾದರಿ: ಹಕ್ಕಿಗಳು**

1. **ಹಕ್ಕಿಗಳು** ಗೂಡುಗಳಲ್ಲಿ ವಾಸ ಮಾಡುತ್ತದೆ.
2. **ಹಕ್ಕಿಗಳನ್ನು** ರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.
3. **ಹಕ್ಕಿಗಳಿಂದ** ಮನುಷ್ಯರಿಗೆ ಮನರಂಜನೆ ದೊರೆಯುತ್ತದೆ.
4. **ಹಕ್ಕಿಗಳಿಗೆ** ಕಾಳುಗಳು ಬಹು ಪ್ರಿಯವಾದ ಆಹಾರವಾಗಿವೆ.
5. **ಹಕ್ಕಿಗಳ** ದೆಸೆಯಿಂದ ಪುಕ್ಕಗಳು ಕೆಳಗೆ ಉದುರಿದವು.
6. **ಹಕ್ಕಿಗಳ** ಮರಿಗಳನ್ನು ಕಂಡು ಮಕ್ಕಳು ಕುಣಿದಾಡಿದರು.
7. **ಹಕ್ಕಿಗಳಲ್ಲಿ** ಹಲವು ಪ್ರಭೇದಗಳಿವೆ.

ಗಮನಿಸಿ: 'ಗೆ' ಪ್ರತ್ಯಯವು 'ಇ' ಕಾರ, 'ಎ' ಕಾರ, 'ಐ' ಕಾರಗಳು ಅಂತ್ಯದಲ್ಲಿರುವ ಪ್ರಕೃತಿಗಳಿಗೆ ಏಕವಚನದಲ್ಲಿ ಸೇರುತ್ತದೆ. (ಇಲಿಗೆ. ಮೈಗೆ). 'ಕ್ಕೆ' ಪ್ರತ್ಯಯವು 'ಅ'ಕಾರಾಂತ ನಪುಂಸಕಲಿಂಗ ಪ್ರಕೃತಿಗಳಿಗೆ ಏಕವಚನದಲ್ಲಿ ಸೇರುತ್ತದೆ. (ಊಟಕ್ಕೆ, ನೆಲಕ್ಕೆ). 'ಅಕ್ಕೆ' ಪ್ರತ್ಯಯವು ದಿಕ್ಕುಗಳನ್ನು ಸೂಚಿಸುವ ನಾಮಪ್ರಕೃತಿಗಳಿಗೆ ಸೇರುತ್ತದೆ. (ಮೇಲಕ್ಕೆ, ದಕ್ಷಿಣಕ್ಕೆ). 'ಇಗೆ' ಪ್ರತ್ಯಯವು ಮೇಲಿನ ಪ್ರತ್ಯಯಗಳು ಬರದ ಸಂದರ್ಭದಲ್ಲಿ ಬರುತ್ತವೆ. (ಅಜ್ಜನಿಗೆ. ಒಬ್ಬನಿಗೆ, ದೊಡ್ಡವಳಿಗೆ)

**1. ಕೊಳ**

ಉ. ______________________________.

______________________________.

______________________________.

______________________________.

______________________________.

______________________________.

______________________________.

**2. ಅವರು**

ಉ. ______________________________.

______________________________.

______________________________.

______________________________.

______________________________.

______________________________.

______________________________.

**ಙ. ಕೊಟ್ಟಿರುವ ಗದ್ಯಭಾಗದಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ, ಕಾರಕಾರ್ಥವನ್ನು ಬರೆಯಿರಿ.**

1. ಇತ್ತರಸನುಮಾ ಇರುಳೊಳ್ ಶ್ವೇತವೃಷಭನಂ ಕನಸಿನೊಳ್ ಕಂಡು ಪೊಳ್ತರಿನೋಲಗದೊಳ್ ಆಸ್ಥಾನದ ನಡುವೆ ಸಿಂಹಾಸನಮಸ್ತಕಸ್ಥಿತನಾಗಿ ತನ್ನ ಕಂಡ ಕನಸಂ ಮಂತ್ರಿಗೆ ಪೇಳ್ವೊಡೆ ಮಂತ್ರಿಯುಮಿಂತೆಂದು ಕನಸಿನ ಫಲಮನರಸಂಗೆ ಪೇಳ್ದಂ ದೇವಾ ನಿಮಗಿಂದು ಪುತ್ರಲಾಭಮಾದುದೆಂದು ಪೇಳ್ವೊಡದಂ ಕೇಳ್ದರಸಿಯ ರ್ಕಳೊಳಗಾರ್ವ್ವೆಸಲೆಯಾಗಿ ಮಗನಂ ಪೆತ್ತಳೆಂದಾರಯ್ದು ಬನ್ನಿಮೆಂದು ಪಡಿಯರರ್ಗೆ ಬೆಸವೇಳ್ವೊಡವರ್ ರಾಣಿವಾಸಕ್ಕೆ ಪೋದನು.

| ಪದ | ಪ್ರತ್ಯಯ | ವಿಭಕ್ತಿ | ಕಾರಕಾರ್ಥ |
|---|---|---|---|
| **ಮಾದರಿ: ಇರುಳೊಳ್** | ಒಳ್ | ಸಪ್ತಮಿ | ಅಧಿಕರಣ |
| | | | |
| | | | |
| | | | |
| | | | |

2. ಪಳಯಿಗೆಯನುಡುಗಿ ರಥಮಂ
ಪೆಳವನೆಸಗಲ್ಕೆವೇಳ್ದು ಸುತಶೋಕದ ಪೊಂ
ಪುಳಿಯೊಳ್ ಮೆಯ್ಯುರಿಯದೆ ನೀ
ಎಳಿವಂತೆವೊಲ್ ಇಳಿದನಪರಜಳಧಿಗೆ ದಿನಪಂ

ಹೊಸಗನ್ನಡದಲ್ಲಿ ಪಂಚಮಿ ವಿಭಕ್ತಿ ಪ್ರತ್ಯಯವಾದ 'ದೆಸೆಯಿಂದ'ದ ಕಾರ್ಯವನ್ನು ತೃತೀಯ ವಿಭಕ್ತಿ ಪ್ರತ್ಯಯವಾದ 'ಇಂದ'ವೇ ಮಾಡುವುದರಿಂದ ದೆಸೆಯಿಂದ ಪ್ರತ್ಯಯವು ಹೆಚ್ಚು ಬಳಕೆಯಲ್ಲಿಲ್ಲ.

| ಪದ | ಪ್ರತ್ಯಯ | ವಿಭಕ್ತಿ | ಕಾರಕಾರ್ಥ |
|---|---|---|---|
| | | | |
| | | | |
| | | | |
| | | | |

3. ನಿನ್ನ ದಯೆಯಿಂದಂ ಅರಿನೃಪ
ರಂ ನೆರೆ ಕೊಂದೆಮಗೆ ಸಕಳ ರಾಜ್ಯಶ್ರೀಯುಂ
ನಿನ್ನ ಬಲದಿಂದೆ ಸಾರ್ದುದು
ನಿನ್ನುಪಕಾರಮನದೇತರೊಳ್ ನೀಗುವೆನೋ

**ಗಮನಿಸಿ:** ವಿಭಕ್ತಿ ಪ್ರತ್ಯಯಗಳು ಏಕವಚನ ಮತ್ತು ಬಹುವಚನಗಳೆರಡರಲ್ಲೂ ಪ್ರಯೋಗಿಸಲ್ಪಡುತ್ತವೆ.

| ಪದ | ಪ್ರತ್ಯಯ | ವಿಭಕ್ತಿ | ಕಾರಕಾರ್ಥ |
|---|---|---|---|
| | | | |
| | | | |
| | | | |
| | | | |

**ಎ. ಶಿಕ್ಷಕರ ಸಹಾಯದಿಂದ ಬಿಟ್ಟ ಸ್ಥಳಗಳಲ್ಲಿ ಸೂಕ್ತ ವಿಭಕ್ತಿ ಪ್ರತ್ಯಯಗಳನ್ನು ತುಂಬಿ ಗದ್ಯಭಾಗವನ್ನು ಪೂರ್ಣಗೊಳಿಸಿ.**

1. ಈ ಜಂಬೂದ್ವೀಪ ___ ಭರತಕ್ಷೇತ್ರ ___ ಕುರುಜಾಂಗಣಮೆಂಬುದು ನಾಡಲ್ಲಿ ಹಸ್ತಿನಾಪುರಮೆಂಬುದು ಪೊಳಲದನಾಳ್ವೊಂ ವಿಶ್ವಸೇನ ಮಹಾರಾಜನೆಂಬರಸನಾತನ ಮಹಾದೇವಿ ಸಹದೇವಿಯೆಂಬೊಳಾಯಿರ್ವರ್ಗ್ಗಂ ಸನತ್ಕುಮಾರನೆಂಬೊಂ ಪುಟ್ಟಿದೊನಾತ ___ ಸರ್ವಲಕ್ಷಣಸಂಪೂರ್ಣ___ ಸಕಳಕಳಾಪಾರೆಗಂ ಚೆಲ್ವಿನಿಂ ದೇವಾಸುರರ್ಕಳಂ ಗೆಲ್ವ ರೂಪನೊಡೆಯನಾತ ___ ಕೆಳೆಯ ___ ಸಿಂಹವಿಕ್ರಮನೆಂಬ ಸಾಮಂತ ___ ಮಗ ಮಹೇಂದ್ರಸಿಂಹನೆಂಬೊನಂತವರ್ಗ್ಗನ್ಯೋನ್ಯ ಪ್ರೀತಿಯಿ ___ ಕಾಲ ___ ಸೆಲೆ

2. ಆ ಜಂಬುಕನೊಂದು ದಿವಸ ___ ಆಹಾರ ವಿಹಾರಕಾಂಕ್ಷೆ ___ ಅಡವಿಯೆಲ್ಲ ___ ತೊಳಲ್ದು ಎಲ್ಲಿಯುಮೇನು ___ ಪಡೆಯದೆ ತನಗೆ ಸಹಾಯನಪ್ಪುಕೊಂದು ವಾಯಸನಿರ್ದಲ್ಲಿ ___ ಬರ್ಪುದು ಮಾ ವಾಯಸ ___ ಇದಿರ್ವಂದು, ಎಲೆ ಭಾವ, ಏಂ ಬಡವಾದಿರೆನೆ ಪಲವು ದಿವಸಮಾಹಾರಂಬಡೆಯದೆ ಬಡವಾಗಿ ನಿನ್ನಲ್ಲಿ ಆಸೆಪಟ್ಟು ಬಂದೆನೆಂಬುದುಂ, ಇದಾವ ಗಹನಮೀಗಳಾಂ ಪೋಗಿ ಬರ್ಪನ್ನೆವರಮಿಲ್ಲಿಯೇ ನಿಲ್ಲಿಮೆಂದು ವಾಯುವೇಗ ___ ವಾಯಸ ___ ಪೋಗಿ ಬಂದು,

**ಏ. ಗೆರೆ ಎಳೆದ ಪದವನ್ನು ಗಮನಿಸಿ ಕೆಳಗಿನ ವಾಕ್ಯಗಳನ್ನು ಸೂಚನೆಯಂತೆ ಬದಲಾಯಿಸಿ.**

1. ಶಂತನು <u>ಹಸ್ತಿನಾವತಿಗೆ</u> ರಾಜ (ಈ ವಾಕ್ಯವನ್ನು 'ಷಷ್ಠಿ' ವಿಭಕ್ತಿಗೆ ಪರಿವರ್ತಿಸಿ)

   ______________________________ .

2. ಪ್ರವಾಸಕ್ಕೆ ತೆರಳಿದ ಮಕ್ಕಳು ಮುಂಜಾನೆ ಸಂತೋಷದಿಂದ <u>ಬೆಟ್ಟಕ್ಕೆ</u> ಹತ್ತಿದರು. (ವಾಕ್ಯವನ್ನು 'ದ್ವಿತೀಯಾ' ವಿಭಕ್ತಿಗೆ ಪರಿವರ್ತಿಸಿ)

   ______________________________ .

3. ಅಮ್ಮನನ್ನು ಕಂಡು ಓಡಿಬರುತ್ತಿದ್ದ ಮಗುವು <u>ಹಳ್ಳಕ್ಕೆ</u> ಬಿದ್ದಿತು. (ವಾಕ್ಯವನ್ನು 'ಸಪ್ತಮಿ' ವಿಭಕ್ತಿಯಲ್ಲಿ ಬರೆಯಿರಿ)

   ______________________________ .

4. ಹುಲಿಯಿಂದ ಪಾರಾದ ಶಾನುಭೋಗರು ಸುರಕ್ಷಿತವಾಗಿ <u>ಮನೆಯನ್ನು</u> ಸೇರಿದರು. (ವಾಕ್ಯವನ್ನು 'ಚತುರ್ಥಿ' ವಿಭಕ್ತಿಯಲ್ಲಿ ಪ್ರಯೋಗಿಸಿ)

   ______________________________ .

5. ಅಮ್ಮನಿಂದ ಉಡುಗೊರೆ ಪಡೆದ ನಿತ್ತಿಲೆಯು ಅದನ್ನು ತನ್ನ ಗೆಳತಿಯರಿಗೆ ತೋರಿಸಲೆಂದು <u>ಮನೆಯ ದೆಸೆಯಿಂದ</u> ಹೊರ ಬಂದಳು. (ಈ ವಾಕ್ಯವನ್ನು 'ತೃತೀಯ' ವಿಭಕ್ತಿಯಲ್ಲಿ ಪ್ರಯೋಗಿಸಿ)

   ______________________________ .

ಐ. ಕೊಡಲಾಗಿರುವ ಖಾಲಿ ಪಟ್ಟಿಯಲ್ಲಿ ಕನ್ನಡದ ಪ್ರಸಿದ್ಧ ವಯ್ಯಾಕರಣಿಗಳು ಮತ್ತು ಅವರ ಕೃತಿಗಳನ್ನು ಪಟ್ಟಿ ಮಾಡಿ.

| ವಯ್ಯಾಕರಣಿಗಳು | ಕೃತಿಗಳು | ವಯ್ಯಾಕರಣಿಗಳು | ಕೃತಿಗಳು |
|---|---|---|---|
| | | | |
| | | | |
| | | | |

ಒ. ಕೊಟ್ಟಿರುವ ಚೌಕದಲ್ಲಿ ಖಾಲಿಯಿರುವ ಸ್ಥಳಗಳನ್ನು ತುಂಬಿರಿ.

| ವಿಭಕ್ತಿಯ ಹೆಸರು | ಪ್ರತ್ಯಯ | ನಾಮಪದ ರೂಪ |
|---|---|---|
| ಪ್ರಥಮ | ಉ | ಬಸವನು |
| ದ್ವಿತೀಯ | | ಬಸವನನ್ನು |
| | ಇಂದ | ಬಸವನಿಂದ |
| ಚತುರ್ಥಿ | ಇಗೆ | |
| ಪಂಚಮಿ | ದೆಸೆಯಿಂದ | |
| ಷಷ್ಠಿ | ಅ | |
| ಸಪ್ತಮಿ | | ಬಸವನಲ್ಲಿ |

## ವಿದ್ಯಾರ್ಥಿಯ ಸ್ವ-ಮೌಲ್ಯಮಾಪನ

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಬಲ್ಲೇ | | | |
| 2 | ಕಾರಕಾರ್ಥಗಳನ್ನು ಬರೆಯಬಲ್ಲೇ | | | |
| 3 | ನಾಮ ಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ನಾಮಪದಗಳನ್ನು ರಚಿಸಬಲ್ಲೇ | | | |

### ಶಿಕ್ಷಕರ ಅಭಿಪ್ರಾಯ

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 1 ಕಿರುಪರೀಕ್ಷೆ

**ಅ. ಈ ಚೌಕದಲ್ಲಿರುವ ಅಂಕಿಗಳು ವರ್ಣಮಾಲೆಯ ಯಾವ ಅಂಶಗಳನ್ನು ಪ್ರತಿನಿಧಿಸುತ್ತವೆ ಎಂದು ಬರೆಯಿರಿ.**

| ಸಂಖ್ಯೆಗಳು | ವರ್ಣಮಾಲೆಯ ಅಂಶಗಳು | ಸಂಖ್ಯೆಗಳು | ವರ್ಣಮಾಲೆಯ ಅಂಶಗಳು |
|---|---|---|---|
| 07 | | 49 | |
| 02 | | 10 | |
| 13 | | 25 | |
| 09 | | 34 | |
| 06 | | 05 | |

**ಆ. ಗುಂಪಿಗೆ ಸೇರದ ಪದವನ್ನು ಆರಿಸಿ ಬರಿಯಿರಿ.**

1. ವಿಪಿನದೊಳ್ ಒಡಲಿನೊಳ್ ಪುಲಿಯಿಂದಂ ಕಾಪಿನೊಳ್ __________
2. ಮರಕ್ಕೆ ಮಗನನ್ನು ಮನಸಿಗೆ ಮನುಷ್ಯನಿಗೆ __________
3. ಸಂಬಂಧ ಕರ್ಮ ಕರಣ ಅಧಿಕರಣ __________
4. ಭಾರತದಲ್ಲಿ ನದಿಯಿಂದ ರಸ್ತೆಗೆ ಬರುತ್ತಾಳೆ __________
5. ವಕೀಲನಿಗೆ ವಕೀಲನಿಂದ ವಕೀಲನು ವಕೀಲರಲ್ಲಿ __________
6. ಪುಸ್ತಕಂ ಮೊಲಂ ಕಾವ್ಯಮಂ ಕೊಳಂ __________

**ಇ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕಿರುವ ಸಂಬಂಧವನ್ನು ಗುರುತಿಸಿ ಬರೆಯಿರಿ.**

1. ಎಲ್ಲಿಂದ : ಪ್ರಶ್ನಾರ್ಥಕ ಸರ್ವನಾಮ : : ನೀನು : __________
2. ನೂರು : ಸಂಖ್ಯಾವಾಚಕ :: ಇಷ್ಟು : __________
3. ಹಿರಿಮೆ : ಭಾವನಾಮ :: ತೆಂಕಣ : __________

4. ಶಾರದೆ : ಅಂಕಿತನಾಮ :: ಕವಿ : ______________

5. ನೀನು : ಮಧ್ಯಮ ಪುರುಷ :: ನಾನು : ______________

6. ರೂಢನಾಮ : ವಸ್ತುವಾಚಕ :: ಆತ್ಮಾರ್ಥಕ ಸರ್ವನಾಮ : ______________

**ಉ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಸ್ವರ ಎಂದರೇನು?**

ಉ. ______________________________ .

**2. ವ್ಯಂಜನಗಳು ಎಂದರೇನು?**

ಉ. ______________________________ .

**3. ಅನುನಾಸಿಕ ಎಂದರೇನು?**

ಉ. ______________________________ .

**4. ಯೋಗವಾಹಗಳು ಎಂದರೇನು?**

ಉ. ______________________________ .

**5. ಗುಣಿತಾಕ್ಷರಗಳು ಎಂದರೇನು?**

ಉ. ______________________________ .

**6. ಸಂಯುಕ್ತಾಕ್ಷರಗಳು ಎಂದರೇನು?**

ಉ. ______________________________ .

**7. ವರ್ಣೋತ್ಪತ್ತಿ ಸ್ಥಾನಗಳು ಎಂದರೇನು?**

ಉ. ______________________________ .

**ಶಿಕ್ಷಕರ ಅಭಿಪ್ರಾಯ**

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 4 ಕ್ರಿಯಾಪದಗಳು

ಅ. ನಿಮಗೆ ತಿಳಿದಿರುವ 20 ಕ್ರಿಯಾಪದಗಳನ್ನು ಬರೆಯಿರಿ.

| | | | |
|---|---|---|---|
| | | | |
| | | | |
| | | | |
| | | | |
| | | | |

ಆ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಧಾತುಗಳು ಎಂದರೇನು?

ಉ. ______________________________________________

______________________________________________ .

2. ಧಾತುಗಳಲ್ಲಿರುವ ಎರಡು ವಿಧಗಳಾವುವು?

ಉ. ______________________________________________

______________________________________________ .

3. ಅರ್ಥರೂಪದ ಕ್ರಿಯಾರೂಪಗಳು ಯಾವುವು?

ಉ. ______________________________________________

______________________________________________ .

ಇ. 'ಯುದ್ಧ' ಪಾಠದಲ್ಲಿರುವ ಕ್ರಿಯಾಪದಗಳನ್ನೊಳಗೊಂಡ 8 ವಾಕ್ಯಗಳನ್ನು ಆರಿಸಿ ಬರೆಯಿರಿ.

1. ______________________________________________
2. ______________________________________________
3. ______________________________________________
4. ______________________________________________
5. ______________________________________________
6. ______________________________________________

7. ______________________________

8. ______________________________

ಪೂರ್ಣಗೊಂಡ ಒಂದು ಕ್ರಿಯೆಯ ಅರ್ಥಕೊಡುವ ಪದಗಳನ್ನು ಸಾಮಾನ್ಯವಾಗಿ 'ಕ್ರಿಯಾಪದ' ಎನ್ನುತ್ತೇವೆ. ಕ್ರಿಯಾಪದದ ಮೂಲರೂಪವನ್ನು 'ಧಾತು' ಅಥವಾ 'ಕ್ರಿಯಾಪ್ರಕೃತಿ' ಎನ್ನುತ್ತೇವೆ. ಇವು ಪ್ರತ್ಯಯಗಳನ್ನು ಹೊಂದಿರುವುದಿಲ್ಲ. ಧಾತುಗಳಲ್ಲಿ ಎರಡು ವಿಧ 'ಮೂಲಧಾತು' ಮತ್ತು 'ಸಾಧಿತ ಧಾತು' (ಪ್ರತ್ಯಯಾಂತ ಧಾತು)

**ಈ. 'ಇಸು' ಪ್ರತ್ಯಯವನ್ನು ಸೇರಿಸಿ ಮಾದರಿಯಂತೆ ಬರೆಯಿರಿ.**

**ಮಾದರಿ: ಚಿತ್ರ :** ಚಿತ್ರಿಸು, ಚಿತ್ರಿಸಿದನು, ಚಿತ್ರಿಸುತ್ತಾನೆ, ಚಿತ್ರಿಸುವನು, ಚಿತ್ರಿಸಲಿ, ಚಿತ್ರಿಸನು, ಚಿತ್ರಿಸಿಯಾನು.

- ಅಬ್ಬರ : ______________________________ .
- ನಿದ್ರೆ : ______________________________ .
- ಯತ್ನ : ______________________________ .
- ಭಾವ : ______________________________ .
- ಪಾಲನೆ : ______________________________ .
- ರಕ್ಷಣೆ : ______________________________ .
- ಅನುಸರಣೆ : ______________________________ .
- ಭಕ್ಷಣೆ : ______________________________ .

**ಉ. ಕೊಟ್ಟಿರುವ ಮಾದರಿಯಂತೆ ಅಕರ್ಮಕ ಧಾತುಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ.**

**ಮಾದರಿ: ಮಗು** ಮಲಗಿತು.

- ಬರು : ______________________________ .
- ಓಡು : ______________________________ .
- ಹೊಳೆ : ______________________________ .
- ಹೋಗು: ______________________________ .

- ಬೀಳು : ______________________________________________.

- ನಾಚು : ______________________________________________.

**ಊ. ಕೊಟ್ಟಿರುವ ಮಾದರಿಯಂತೆ ಸಕರ್ಮಕ ಧಾತುಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ.**

**ಮಾದರಿ: ಕಳ್ಳರು ಗಂಧದ ಮರವನ್ನು ಕಡಿದರು.**

- ಮಾಡು : ______________________________________________.

- ಉಜ್ಜು : ______________________________________________.

- ತಡೆ : ______________________________________________.

- ಓದು : ______________________________________________.

- ನೋಡು : ______________________________________________.

- ಕರೆ : ______________________________________________.

- ಬಿಡು : ______________________________________________.

**ಋ. ಕೊಟ್ಟಿರುವ ಸಕರ್ಮಕ ಧಾತುಗಳನ್ನೊಳಗೊಂಡ ವಾಕ್ಯಗಳಲ್ಲಿ ಕರ್ಮ ಪದವನ್ನು ತುಂಬಿರಿ.**

**ಉದಾ:** ಅವನು ____________________ ಸೇರಿದನು. (ಮನೆಯನ್ನು)

1. ಶಂಕರನು ____________________ ಕತ್ತರಿಸಿದನು.
2. ವ್ಯಾಪಾರಿಗಳು ____________________ ಮುಚ್ಚಿದರು.
3. ಶಿಲ್ಪಿಗಳು ____________________ ಕೆತ್ತಿದರು.
4. ಗೋಪಾಲನು ____________________ ಕರೆದನು.
5. ಅಬ್ದುಲನು ____________________ ತುಂಬಿದನು.
6. ಕ್ಯಾಥರೀನಳು ____________________ ದಾಟಿದಳು.
7. ಬಾಲಕರು ____________________ ಹಾರಿಸಿದರು.
8. ಜನರು ____________________ ಪಾಲಿಸಿದರು.

9. ರೈತರು ________________ ಬಿತ್ತಿದರು.

10. ಮಂಗಗಳು ________________ ತಿಂದವು.

11. ನೂರ್ಜಹಾನಳು ________________ ಓದಿದಳು.

12. ಮದರ್ ಥೆರೆಸಾ ಅವರು ಅರ್ಬುದ ರೋಗಿಗಳ ________________ ಮಾಡಿದರು.

ಅಕರ್ಮಕ ಧಾತುಗಳಿಗೆ 'ಇಸು' ಪ್ರತ್ಯಯವನ್ನು ಸೇರಿಸಿದಾಗ ಅವು ಸಕರ್ಮಕ ಧಾತುಗಳಾಗುತ್ತವೆ.

ಉದಾ: ಮಲಗು + ಇಸು = ಮಲಗಿಸು

ಓಡು + ಇಸು = ಓಡಿಸು

- ತಾಯಿಯು ಮಗುವನ್ನು ಮಲಗಿಸಿದಳು.
- ಯಶವಂತನು ಬಂಡಿಯನ್ನು ಓಡಿಸಿದನು.

- ವಾಕ್ಯವು ಪ್ರಶ್ನಾರ್ಥಕವಾಗಿದ್ದರೂ ವಿಧ್ಯರ್ಥಕದಲ್ಲಿ 'ಅಲಿ' ಎಂಬ ಆಖ್ಯಾತ ಪ್ರತ್ಯಯ ಬರುತ್ತದೆ.
  ಉದಾ: ತಾಯಿಯ ಹಾಲೇ ವಿಷವಾದರೆ ಯಾರನ್ನು ದೂರಲಿ?
- ಒಂದೇ ಕ್ರಿಯೆಗೆ ಅನೇಕ ಕರ್ತೃಗಳಿದ್ದಾಗ ಕೊನೆಯ ಕರ್ತೃ ಪದದ ಲಿಂಗವೇ ಕ್ರಿಯಾಪದಕ್ಕೂ ಬರುತ್ತದೆ.
  ಉದಾ: ಆನೆಯೂ, ಕುದುರೆಯೂ. ಒಂಟೆಯೂ, ಮನುಷ್ಯರೂ ಬಂದರು.
- ಹಲವಾರು ಸರ್ವನಾಮಗಳು ಒಂದೇ ಕ್ರಿಯೆಗೆ ಕರ್ತೃಗಳಾಗಿದ್ದಾಗ ಕ್ರಿಯಾಪದವು ಉತ್ತಮ ಪುರುಷವೇ ಆಗಿರುತ್ತದೆ.
  ಉದಾ: ನಾನೂ, ನೀನೂ, ಅವನೂ ಬಂದೆವು.

**ಎ. ಕೊಟ್ಟಿರುವ ಅನುಕರಣಾವ್ಯಯಗಳಿಗೆ 'ಇಸು' ಪ್ರತ್ಯಯ ಸೇರಿಸಿ ಮಾದರಿಯಂತೆ ಕ್ರಿಯಾಪದವನ್ನಾಗಿ ಮಾಡಿರಿ.**

| ಅನುಕರಣಾವ್ಯಯ | ಇಸು | ಧಾತು | ಕ್ರಿಯಾಪದ |
|---|---|---|---|
| **ಮಾದರಿ: ಥಳಥಳ** | **ಇಸು** | **ಥಳಥಳಿಸು** | **ಥಳಥಳಿಸುತ್ತಾಳೆ.** |
| ಘಮಘಮ | | | |
| ಧಗಧಗ | | | |
| ಗುಡುಗುಡು | | | |
| ಝುಗಝುಗ | | | |

**ಕ್ರಿಯಾಪದದ ಕುರಿತು ಹೆಚ್ಚಿನ ಮಾಹಿತಿಗಾಗಿ ಗಮನಿಸಿ:**

ಕ್ರಿಯಾಪದದಲ್ಲಿ ಮೂರು ಅಂಶಗಳಿದ್ದು ಅವು ಸಂಧಿ ನಿಯಮಗಳ ಪ್ರಕಾರ ಸೇರುತ್ತವೆ.

**ಉದಾ:** ಧಾತು + ಕಾಲಸೂಚಕ ಪ್ರತ್ಯಯ + ಆಖ್ಯಾತ ಪ್ರತ್ಯಯ = ಕ್ರಿಯಾಪದ

ಹೋಗು + ಉತ್ತ + ಆನೆ = ಹೋಗುತ್ತಾನೆ

ನಡೆ + ದ + ಆಳು = ನಡೆದಳು

ನೋಡು + ವ + ಎವು = ನೋಡುವೆವು

'ಉತ್ತ' ಪ್ರತ್ಯಯವು ವರ್ತಮಾನ ಕಾಲವನ್ನೂ, 'ದ' ಪ್ರತ್ಯಯವು 'ಭೂತ' ಕಾಲವನ್ನೂ, 'ವ' ಪ್ರತ್ಯಯವು ಭವಿಷ್ಯತ್ ಕಾಲವನ್ನೂ ಸೂಚಿಸುವ ಕಾಲಪ್ರತ್ಯಯಗಳು. ಭೂತಕಾಲದ, ಪ್ರಥಮ ಪುರುಷ, ನಪುಂಸಕಲಿಂಗ ಏಕವಚನದ ಪ್ರತ್ಯಯವನ್ನು ಸೇರಿಸುವಾಗ 'ದ' ಕಾಲ ಸೂಚಕ ಪ್ರತ್ಯಯ ಸೇರುವುದಿಲ್ಲ.

ಉದಾ: ಮಾಡು = ಮಾಡಿತು

**ಆಖ್ಯಾತ ಪ್ರತ್ಯಯಗಳು ಯಾವುವೆಂದರೆ ;**

| ಪುರುಷ | ವರ್ತಮಾನ ಕಾಲ | | ಭೂತ ಕಾಲ | | ಭವಿಷ್ಯತ್ ಕಾಲ | |
|---|---|---|---|---|---|---|
| | ಏಕವಚನ | ಬಹುವಚನ | ಏಕವಚನ | ಬಹುವಚನ | ಏಕವಚನ | ಬಹುವಚನ |
| ಉತ್ತಮ ಪುರುಷ | ಏನೆ | ಏವೆ | ಎನು | ಎವು | ಎನು | ಎವು |
| ಮಧ್ಯಮ ಪುರುಷ | ಈಯೆ | ಈರಿ | ಎ | ಇರಿ | ಎ | ಇರಿ |
| ಪ್ರಥಮ/ಅನ್ಯ ಪುರುಷ ಪುಲ್ಲಿಂಗ | ಆನೆ | ಆರೆ | ಅನು | ಅರು | ಅನು | ಅರು |
| ಸ್ತ್ರೀ ಲಿಂಗ | ಆಳೆ | ಆರೆ | ಅಳು | ಅರು | ಅಳು | ಅರು |
| ನಪುಂಸಕ ಲಿಂಗ | ಅದೆ | ಅವೆ | ಇತು | ಉವು | ಉದು | ಉವು |

ಏ. ಮೇಲಿನ ಪಟ್ಟಿಯನ್ನು ಗಮನಿಸಿ 'ಮಾಡು' ಎಂಬ ಧಾತುವಿಗೆ ಪುರುಷಾರ್ಥಕ ಸರ್ವನಾಮಗಳಿಗನುಗುಣವಾಗಿ ಪ್ರತ್ಯಯಗಳನ್ನು ಸೇರಿಸಿ.

| ಪುರುಷ | ವರ್ತಮಾನ ಕಾಲ | | ಭೂತ ಕಾಲ | | ಭವಿಷ್ಯತ್ ಕಾಲ | |
|---|---|---|---|---|---|---|
| | ಏಕವಚನ | ಬಹುವಚನ | ಏಕವಚನ | ಬಹುವಚನ | ಏಕವಚನ | ಬಹುವಚನ |
| ಉತ್ತಮ ಪುರುಷ | | | | | | |
| ಮಧ್ಯಮ ಪುರುಷ | | | | | | |
| ಪ್ರಥಮ/ಅನ್ಯ ಪುರುಷ ಪುಲ್ಲಿಂಗ | | | | | | |
| ಸ್ತ್ರೀ ಲಿಂಗ | | | | | | |
| ನಪುಂಸಕ ಲಿಂಗ | | | | | | |

ಐ. ಕೊಟ್ಟಿರುವ ಕ್ರಿಯಾಪದಗಳನ್ನು ಮಾದರಿಯಂತೆ ವಿಂಗಡಿಸಿ ಬರೆಯಿರಿ.

| ಕ್ರಿಯಾಪದ | ಧಾತು | ಕಾಲಸೂಚಕ | ಆಖ್ಯಾತ ಪ್ರತ್ಯಯ |
|---|---|---|---|
| **ಮಾದರಿ:** ಬರೆಯುತ್ತಾನೆ | ಬರೆ | ಉತ್ತ | ಆನೆ |
| ಹಾಡುವಳು | | | |
| ಆಲಿಸುತ್ತಾರೆ | | | |
| ತಿನ್ನುವುದು | | | |
| ಬೆಳೆದನು | | | |
| ಕುಣಿಯುವರು | | | |
| ಓದುತ್ತಾನೆ | | | |
| ನೋಡಿದಳು | | | |
| ಮೂಡುತ್ತದೆ | | | |
| ಕಟ್ಟುವುದು | | | |
| ಹೊಡೆಯಿತು | | | |
| ಓದುತ್ತಾಳೆ | | | |
| ಊದಿದನು | | | |
| ನಗುವರು | | | |

‘ಇ’ ಕಾರಾಂತ ‘ಎ’ ಕಾರಾಂತ ಧಾತುಗಳ ರೂಪಗಳನ್ನು ಗಮನಿಸಿ.

ನುಡಿ – ನುಡಿಯುತ್ತೇನೆ, ನುಡಿದೆ, ನುಡಿಯುವೆ

ಬರೆ – ಬರೆಯುತ್ತೇನೆ, ಬರೆದೆ, ಬರೆಯುವೆ

‘ಉ’ ಕಾರಾಂತ ಧಾತುಗಳು ಭೂತಕಾಲದಲ್ಲಿ ‘ಇ’ ಕಾರಾಂತವಾಗಿ ಮಾರ್ಪಟ್ಟು ಕಾಲಸೂಚಕ ಪ್ರತ್ಯಯವನ್ನು ಸೇರಿಸಿಕೊಳ್ಳುತ್ತೇವೆ.

ಉದಾ: ಮಾಡು – ಮಾಡಿ – ಮಾಡಿದೆನು, ಮಾಡಿದೆವು, ಮಾಡಿದಿರಿ, ಮಾಡಿದುವು.

ಒ. ಕೊಟ್ಟಿರುವ ಕ್ರಿಯಾಪದಗಳಲ್ಲಿ ಮಾದರಿಯಂತೆ ಕಾಲಗಳನ್ನು ಗುರುತಿಸಿ.

| ಕ್ರಿಯಾಪದ | ಕಾಲಗಳು | ಕ್ರಿಯಾಪದ | ಕಾಲಗಳು |
|---|---|---|---|
| **ಮಾದರಿ:** ಓದುತ್ತಾನೆ | ವರ್ತಮಾನ ಕಾಲ | ನೆಗೆದನು | |
| ಅಂಜುವಳು | | ಕರೆಯುವನು | |
| ಸೇದುತ್ತಾನೆ | | ನೋಡಿದ | |
| ನಂಬಿದ | | ಪಡೆಯುವರು | |
| ಕೆತ್ತುವನು | | ಹೊಕ್ಕಿದಳು | |
| ತಡೆದನು | | ಚಿಮ್ಮಿತು | |

## ಓ. ಮಾದರಿಯಂತೆ ಕ್ರಿಯಾಪದದ ಕಾಲವನ್ನು ಗುರುತಿಸಿ ಉಳಿದೆರಡು ಕಾಲಗಳಿಗೆ ಪರಿವರ್ತಿಸಿ.

| ಮಾದರಿ: ಬರೆಯುತ್ತಾನೆ | ಬರೆಯುವನು | ಬರೆದನು |
|---|---|---|
| ನೆನೆಯುವಳು | | |
| ಹೀರುವುದು | | |
| ಗುಡಿಸಿದಳು | | |
| ಒದೆಯುತ್ತದೆ | | |
| ತಲುಪಿದವು | | |

**ಗಮನಿಸಿ:**

| ಪುರುಷ | ವಿಧ್ಯರ್ಥಕ | | ನಿಷೇದಾರ್ಥಕ | | ಸಂಭಾವನಾರ್ಥಕ | |
|---|---|---|---|---|---|---|
| | **ಏಕವಚನ** | ಬಹುವಚನ | **ಏಕವಚನ** | ಬಹುವಚನ | **ಏಕವಚನ** | ಬಹುವಚನ |
| ಉತ್ತಮ ಪುರುಷ | (ಎ) ಮಾಡುವೆ | (ಓಣ) ಮಾಡೋಣ | (ಎನು) ಮಾಡೆನು | (ಎವು) ಮಾಡೆವು | (ಏನು) ಮಾಡೇನು ಮಾಡಿಯೇನು | (ಏವು) ಮಾಡೇವು ಮಾಡಿಯೇವು |
| ಮಧ್ಯಮ ಪುರುಷ | (ಧಾತುರೂಪ) ಮಾಡು | (ಇರಿ) ಮಾಡಿರಿ | (ಎ) ಮಾಡೆ | (ಅರಿ) ಮಾಡರಿ | (ಈಯೆ) ಮಾಡೀಯೆ | (ಈರಿ) ಮಾಡೀರಿ |
| ಪ್ರಥಮ/ಅನ್ಯ ಪುರುಷ ಪುಲ್ಲಿಂಗ | (ಅಲಿ) ಮಾಡಲಿ | (ಅಲಿ) ಮಾಡಲಿ | (ಅನು) ಮಾಡನು | (ಅರು) ಮಾಡರು | (ಆನು) ಮಾಡಿಯಾನು | (ಆರು) ಮಾಡಿಯಾರು |
| ಸ್ತ್ರೀ ಲಿಂಗ | (ಅಲಿ) ಮಾಡಲಿ | (ಅಲಿ) ಮಾಡಲಿ | (ಅಳು) ಮಾಡಳು | (ಅರು) ಮಾಡರು | (ಆಳು) ಮಾಡಿಯಾಳು | (ಆರು) ಮಾಡಿಯಾರು |
| ನಪುಂಸಕ ಲಿಂಗ | (ಅಲಿ) ಮಾಡಲಿ | (ಅಲಿ) ಮಾಡಲಿ | (ಅದು) ಮಾಡದು | (ಅವು) ಮಾಡವು | (ಈತು) ಮಾಡೀತು | (ಆವು) ಮಾಡಿಯಾವು |

**ಗಮನಿಸಿ:** ಕ್ರಿಯಾಪದಗಳು ಕಾಲರೂಪಗಳನ್ನು ಹೊಂದುವುದಲ್ಲದೆ ಅರ್ಥರೂಪಗಳನ್ನೂ ಹೊಂದುತ್ತವೆ. ಇಲ್ಲಿ ಧಾತುವಿಗೆ ಆಖ್ಯಾತ ಪ್ರತ್ಯಯಗಳು ನೇರವಾಗಿ ಸೇರಿಕೊಳ್ಳುತ್ತವೆ. ಇಲ್ಲಿ ಕಾಲಸೂಚಕ ಪ್ರತ್ಯಯಗಳು ಸೇರುವುದಿಲ್ಲ.

## ಔ. ಕೊಟ್ಟಿರುವ ವಾಕ್ಯಗಳಲ್ಲಿ ಕ್ರಿಯಾರ್ಥಕ ಪದಗಳಿಗೆ ಗೆರೆ ಎಳೆದು ಮಾದರಿಯಂತೆ ಬರೆಯಿರಿ.

| ಮಾದರಿ : ಪೀಟರನಿಗೆ ಒಳ್ಳೆಯದಾಗಲಿ. | ಒಳ್ಳೆಯದಾದೀತು | ಒಳ್ಳೆಯದಾಗದು |
|---|---|---|
| 1. ಸಹದೇವನು ನೀರನ್ನು ಕುಡಿದಾನು. | | |
| 2. ಅಂಬುಜಾಳು ಕಥೆಯನ್ನು ಓದಿಯಾಳು. | | |
| 3. ಮೇರಿ ಮತ್ತು ಕಾವ್ಯಶ್ರೀ ಇಬ್ಬರು ರಂಗೋಲಿ ಬಿಡಿಸಿರಿ. | | |

| | | |
|---|---|---|
| 4. ಆ ಕೆಲಸ ನಾವೇ ಮಾಡೋಣ. | | |
| 5. ನೇಮಿನಾಥನು ಪುಸ್ತಕವನ್ನು ಮಾರಲಿ. | | |
| 6. ಜನರು ಗುಂಪಾಗಿ ಜಾತ್ರೆಗೆ ಹೋಗರು. | | |
| 7. ಆಯಿಷಾಳು ಶಾಲೆಗೆ ಬಂದಾಳು. | | |
| 8. ನಾವು ಒಳ್ಳೆಯ ಪುಸ್ತಕಗಳನ್ನು ತಂದೇವು. | | |
| 9. ನಮ್ಮ ಊರಿನ ಜನ ಈ ವರ್ಷವೂ ಊರಹಬ್ಬ ಮಾಡಿಯಾರು. | | |
| 10. ರೈತರ ಒಳಿತಿಗಾಗಿ ಪ್ರತಿ ದಿನವೂ ನಾವು ಪ್ರಾರ್ಥಿಸೋಣ. | | |

**ಅಂ. ಕೊಟ್ಟಿರುವ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ.**

**1. ಅಭಿಮನ್ಯುವು ಬಾಣವನ್ನು ಬಿಡನು. (ಸಂಭಾವನಾರ್ಥಕ ರೂಪಕ್ಕೆ ಪರಿವರ್ತಿಸಿ)**

ಉ. ______________________________ .

**2. ನಾಳೆ ಮಳೆಯು ಬಂದೀತು. (ನಿಷೇಧಾರ್ಥಕ ರೂಪಕ್ಕೆ ಪರಿವರ್ತಿಸಿ)**

ಉ. ______________________________ .

**3. ನಮ್ಮವರೆಲ್ಲ ಇಂದೇ ಬರಲಿ. (ಸಂಭಾವನಾರ್ಥಕ ರೂಪಕ್ಕೆ ಪರಿವರ್ತಿಸಿ)**

ಉ. ______________________________ .

**4. ಜನರು ಗಿಡಗಳಿಗೆ ನೀರನ್ನು ಹಾಕರು. (ವಿಧ್ಯರ್ಥಕ ರೂಪಕ್ಕೆ ಪರಿವರ್ತಿಸಿ)**

ಉ. ______________________________ .

**5. ಕಳ್ಳರನ್ನು ಪೊಲೀಸರೇ ಹಿಡಿಯಲಿ. (ನಿಷೇಧಾರ್ಥಕ ರೂಪಕ್ಕೆ ಪರಿವರ್ತಿಸಿ)**

ಉ. ______________________________ .

## ವಿದ್ಯಾರ್ಥಿಯ ಸ್ವ–ಮೌಲ್ಯಮಾಪನ

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಕ್ರಿಯಾಪದಗಳನ್ನು ಗುರುತಿಸಬಲ್ಲೇ | | | |
| 2. | ಕ್ರಿಯಾಪದದ ವಿಧಗಳನ್ನು ಗುರುತಿಸಬಲ್ಲೇ | | | |
| 3. | ಧಾತು, ಕಾಲಸೂಚಕ ಪ್ರತ್ಯಯ ಮತ್ತು ಆಖ್ಯಾತ ಪ್ರತ್ಯಯಗಳನ್ನು ಸೇರಿಸಿ ಕ್ರಿಯಾಪದ ಬರೆಯಬಲ್ಲೇ | | | |

**ಶಿಕ್ಷಕರ ಅಭಿಪ್ರಾಯ**

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 5 ಸಂಧಿಗಳು

**ಕನ್ನಡ ಸಂಧಿಗಳು**

**1. ಸ್ವರ ಸಂಧಿಗಳು**

**ಲೋಪಸಂಧಿ** (ಇದ್ದ ಅಕ್ಷರ ಬಿಟ್ಟು ಹೋಗುವುದು)
ಸ್ವರ + ಸ್ವರ ಅರ್ಥಕ್ಕೆ ಹಾನಿಯಾಗದಂತೆ ಇದ್ದಾಗ ಪೂರ್ವದ ಕೊನೆಯ ಸ್ವರ ಲೋಪವಾಗುವುದು.

**ಆಗಮಸಂಧಿ** (ಹೊಸದಾಗಿ ಅಕ್ಷರ ಬಂದು ಸೇರುವುದು)
ಸ್ವರ + ಸ್ವರ ಬಂದಾಗ ಮಧ್ಯದಲ್ಲಿ ಸಾಮಾನ್ಯವಾಗಿ 'ವ'ಕಾರ ಅಥವಾ 'ಯ'ಕಾರ ಬರುವುದು.

**2. ವ್ಯಂಜನ ಸಂಧಿ**

- ಅದರ್ಶನಂ ಲೋಪಃ
- ಮಿತ್ರವತ್ ಆಗಮಃ
- ಶತ್ರುವತ್ ಆದೇಶಃ

ಕೆಲವೊಮ್ಮೆ ನಾಮಪದಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರುವಾಗ 'ಇನಾ'ಗಮ 'ದ' ಕಾರಾಗಮ, 'ನ' ಕಾರಾಗಮ, 'ಳ' ಕಾರಾಗಮವು ಬರುತ್ತದೆ.

**ಆದೇಶ ಸಂಧಿ**
(ಒಂದು ಅಕ್ಷರದ ಬದಲು ಬೇರೊಂದು ಅಕ್ಷರ ಬಂದು ಸೇರುವುದು)
ಸ್ವರ + ವ್ಯಂಜನ, ವ್ಯಂಜನ + ವ್ಯಂಜನ ಬಂದಾಗ ಉತ್ತರ ಪದದ ಆದಿಯಲ್ಲಿರುವ
1. ಕ ತ ಪ ಗಳಿಗೆ ಗ ದ ಬ ಗಳು ಆದೇಶವಾಗುತ್ತವೆ.
2. ಪ ಬ ಮ ಗಳಿಗೆ ವಕಾರ ಆದೇಶವಾಗುತ್ತದೆ.
3. ಸ ಕಾರಕ್ಕೆ ಚ ಜ ಛ ಗಳು ಆದೇಶವಾಗುತ್ತವೆ.

## ಅ. ಕೊಟ್ಟಿರುವ ಪದ್ಯದಲ್ಲಿರುವ ಸಂಧಿ ಪದಗಳನ್ನು ಪಟ್ಟಿ ಮಾಡಿ.

| | |
|---|---|
| ಕಲುಷಿತವಾದೀ ನದೀ ಜಲಗಳಿಗೆ | |
| ಮುಂಗಾರಿನ ಮಳೆಯಾಗೋಣ | |
| ಬರಡಾಗಿರುವೀ ಕಾಡುಮೇಡುಗಳ | |
| ವಸಂತವಾಗುತ ಮುಟ್ಟೋಣ | |

## ಆ. ಪದ ಬಿಡಿಸಿ ಸಂಧಿ ಹೆಸರಿಸಿ.

| **ಮಾದರಿ:** ತೆರೆದಿಕ್ಕುವ | ತೆರೆದು + ಇಕ್ಕುವ | ಲೋಪಸಂಧಿ |
|---|---|---|
| ನಿಮ್ಮಾನಂದ | | |
| ಮುರಾರಿಯಂಜುವೆ | | |
| ವಸಂತವಾಗುತ | | |
| ಹಳಗನ್ನಡ | | |

| | | |
|---|---|---|
| ಹೂದೋಟ | | |
| ಕಂಬನಿ | | |

**ಸಂಸ್ಕೃತ ಸಂಧಿಗಳು**

**1. ಸ್ವರ ಸಂಧಿ**

ಸವರ್ಣದೀರ್ಘ ಸಂಧಿ
ಗುಣ ಸಂಧಿ
ವೃದ್ಧಿ ಸಂಧಿ
ಯಣ್ ಸಂಧಿ

- ಸವರ್ಣದೀರ್ಘ ಸಂಧಿ: ಸವರ್ಣಾಕ್ಷರಗಳು ಪರವಾಗಿ ಅದೇ ವರ್ಣವು ದೀರ್ಘವಾಗುವುದು.
- ಗುಣ ಸಂಧಿ: ಏ, ಓ ಮತ್ತು ಅರ್ ಕಾರಗಳು ಆದೇಶವಾಗುವುದು.
- ವೃದ್ಧಿ ಸಂಧಿ: ಐ ಮತ್ತು ಔ ಕಾರಗಳು ಆದೇಶವಾಗುವುದು.
- ಯಣ್ ಸಂಧಿ: ಯ್, ವ್ ಮತ್ತು ರ್ ಕಾರಗಳು ಆದೇಶವಾಗುವುದು.

**2. ವ್ಯಂಜನ ಸಂಧಿ**

ಜಶ್ತ್ವ ಸಂಧಿ
ಶ್ಚುತ್ವ ಸಂಧಿ
ಅನುನಾಸಿಕ ಸಂಧಿ

**ವ್ಯಂಜನ ಸಂಧಿ**

- **ಜಶ್ತ್ವ ಸಂಧಿ:** ಕಚಟತಪಗಳಿಗೆ ಗಜಡದಬಗಳು ಆದೇಶವಾಗುವುದು.
- **ಶ್ಚುತ್ವ ಸಂಧಿ:** ಶಕಾರಕ್ಕೆ ಸಕಾರವು, ತ ವರ್ಗಾಕ್ಷರಗಳಿಗೆ ಚ ವರ್ಗಾಕ್ಷರಗಳು ಆದೇಶವಾಗುವುದು.
- **ಅನುನಾಸಿಕ ಸಂಧಿ:** ವರ್ಗದ ಪ್ರಥಮ ಅಕ್ಷರಗಳಿಗೆ ಅದೇ ವರ್ಗದ ಅನುನಾಸಿಕ ಅಕ್ಷರಗಳು ಆದೇಶವಾಗುವುದು.

**ಇ. ಕೊಟ್ಟಿರುವ ಟಿಪ್ಪಣಿಯಲ್ಲಿರುವ ಸಂಸ್ಕೃತ ಸಂಧಿ ಪದಗಳನ್ನು ಪಟ್ಟಿ ಮಾಡಿ ಬಿಡಿಸಿ, ಸಂಧಿಯನ್ನು ಹೆಸರಿಸಿ.**

ಮೈಸೂರು ಕ್ಷೇತ್ರ ದರ್ಶನಕ್ಕೆ ಹೊರಟ ನಾವು, ಪ್ರಥಮವಾಗಿ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದವು. ಬೆಟ್ಟದಿಂದ ಹಿಂತಿರುಗುವಾಗ ಮಹಿಷಾಸುರನನ್ನು ನೋಡಿಕೊಂಡು, ಪಕ್ಕದಲ್ಲಿದ್ದ ಶ್ರೀಕೃಷ್ಣ ಫಲಾಹಾರ ಮಂದಿರದಲ್ಲಿ ಉಪಾಹಾರ ಸೇವಿಸಿದೆವು. ಮುಂದೆ ಮೈಸೂರು ಅರಮನೆ ನೋಡಲು ಉತ್ಸುಕರಾಗಿದ್ದ ನಾವು ಅತ್ಯವಸರದಲ್ಲಿ ಅರಮನೆ ಒಳ ಪ್ರವೇಶಿಸಿದೆವು. ಒಳಾಂಗಣದಲ್ಲಿ ರತ್ನಖಚಿತ ಸಿಂಹಾಸನ, ಬೃಹಚ್ಛತ್ರ ಚಾಮರಗಳು, ಜಂಬೂ ಸವಾರಿ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ ಮೈಸೂರು ಶೈಲಿಯ ತೈಲ ವರ್ಣ ಚಿತ್ರಗಳು ಮನಸೆಳೆದವು. ಅಮೃತ ಶಿಲೆ, ದಂತದ ಗಂಧದ ಕೆತ್ತನೆಗಳು ಅರಸರು ಬಳಸುತ್ತಿದ್ದ ಶಸ್ತ್ರಾಸ್ತ್ರಗಳು, ವಸ್ತ್ರಾಭರಣಗಳು ಹೃನ್ಮನ ಸೆಳೆದವು. ಸುರೇಂದ್ರಭವನ ಮೀರಿಸುವ ವೈಭವೋಪೇತವಾದ ದರ್ಬಾರ್ ಹಾಲ್ ಹೀಗೆ ಅರಮನೆಯ ಅಷ್ಟೈಶ್ವರ್ಯಗಳನ್ನು ನೋಡುವುದರಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ತನ್ಮಯರಾದೆವು.

| ಪದಗಳು | ಬಿಡಿಸಿ ಬರೆಯುವುದು | ಸಂಧಿಯನ್ನು ಹೆಸರಿಸುವುದು |
|---|---|---|
| | | |
| | | |

| | | |
|---|---|---|
| | | |
| | | |
| | | |
| | | |
| | | |

**ಈ. ಕೊಟ್ಟಿರುವ ಪದಗಳನ್ನು ಮಾದರಿಯಂತೆ ಕೂಡಿಸಿ ಬರೆಯಿರಿ.**

| **ಮಾದರಿ:** ಹಿಮ +ಆಲಯ | ಹಿಮಾಲಯ | ಸವರ್ಣದೀರ್ಘ | ಗುರು + ಆಜ್ಞೆ | | |
|---|---|---|---|---|---|
| ವಧು + ಉಪೇತ | | | ಷಟ್ + ಆನನ | | |
| ಶುಭ + ಉದಯ | | | ಚಿತ್ + ಆನಂದ | | |
| ಏಕ + ಏಕ | | | ಯಶಸ್ + ಚಂದ್ರಿಕೆ | | |
| ವನ + ಔಷಧ | | | ಭಗವತ್ + ಚಿಂತನೆ | | |
| ಮಹಾ + ಔನತ್ಯ | | | ವಾಕ್ + ಮಾಧುರ್ಯ | | |
| ಜಾತಿ + ಅತೀತ | | | ಕರ್ತೃ + ಅರ್ಥ | | |
| ಇತಿ + ಆದಿ | | | ವಾಕ್ + ದೇವಿ | | |

**ಉ. ಹೊಂದಿಸಿ ಬರೆಯಿರಿ.**

| ಅ ಪಟ್ಟಿ | ಬ ಪಟ್ಟಿ | ಉತ್ತರಗಳು |
|---|---|---|
| 1. ಯಜ್ಞಾಶ್ವ | ಅನುನಾಸಿಕ ಸಂಧಿ | ______ |
| 2. ಮಹೇಶ | ಯಣ್ ಸಂಧಿ | ______ |
| 3. ಅಷ್ಟೈಶ್ವರ್ಯ | ಸವರ್ಣದೀರ್ಘ ಸಂಧಿ | ______ |
| 4. ಪ್ರತ್ಯರ್ಥಿ | ಜಶ್ತ್ವ ಸಂಧಿ | ______ |
| 5. ವಾಗ್ದೇವಿ | ವೃದ್ಧಿ ಸಂಧಿ | ______ |
| 6. ಮನಶ್ಚಾಪಲ್ಯ | ಗುಣಸಂಧಿ | ______ |
| | ಶ್ಚುತ್ವ ಸಂಧಿ | |

**ಊ. ಕೊಟ್ಟಿರುವ ಪದಗಳನ್ನು ಬಳಸಿಕೊಡು ಸಂಧಿಪದಗಳನ್ನು ಮಾಡಿ.**

(ಮನೆ, ದೀಪ, ಅನ್ನು, ಈಶ, ಮಯ, ಮಹಾ, ಎಲ್ಲಾ, ಇರಿ, ಅಂತರ, ಗಿರಿ, ಅವಧಿ, ನಡು, ಆಸೆ, ಗಣ, ಋಷಿ, ಕನ್ನಡ, ಚಿತ್, ಶಾಲೆ, ಮೃಗ, ಸೂರ್ಯ, ಸಾಹಿತ್ಯ, ನಾವು, ಆಲಯ, ಉದಯ, ಸೇವಾ, ಮನು, ಪುಸ್ತಕ, ಸತಿ, ಸುರ, ಪುರ, ಗತಿ, ಬರೆ, ಅತಿ)

| **ಉದಾ:** ಅತಿ + ಆಸೆ = ಅತಿಯಾಸೆ | | | |
|---|---|---|---|
| | | | |
| | | | |
| | | | |
| | | | |

**ಋ. ಕೊಟ್ಟಿರುವ ವಾಕ್ಯಗಳಲ್ಲಿರುವ ಸಂಸ್ಕೃತ ಸಂಧಿ ಪದಗಳನ್ನು ಗುರುತಿಸಿ ಸಂಧಿಯನ್ನು ಹೆಸರಿಸಿ.**

| ವಾಕ್ಯಗಳು | ಪದ | ಸಂಧಿ |
|---|---|---|
| ಮಾದರಿ: ನಾನು ರವೀಂದ್ರ ಸಹಪಾಠಿಗಳು | ರವೀಂದ್ರ | ಸವರ್ಣದೀರ್ಘಸಂಧಿ |
| 1. ಶಿಷ್ಯರು ಗುರೂಪದೇಶವನ್ನು ಆಲಿಸಿದರು. | | |
| 2. ಸ್ವರ್ಗದ ಅಧಿಪತಿ ದೇವೇಂದ್ರನಾಗಿದ್ದಾನೆ. | | |
| 3. ನವೆಂಬರ್ ಮಾಹೆಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತೇವೆ. | | |
| 4. ಮಹರ್ಷಿ ವ್ಯಾಸರು ಸಂಸ್ಕೃತದಲ್ಲಿ 'ಮಹಾಭಾರತ' ಕಾವ್ಯವನ್ನು ರಚಿಸಿದರು. | | |
| 5. ದುರ್ಯೋಧನನ ಹಸ್ತಿನಾವತಿ ಸಕಲೈಶ್ವರ್ಯದಿಂದ ಕೂಡಿತ್ತು. | | |
| 6. ಬುದ್ಧನು ಮಹೌನ್ನತ್ಯವನ್ನು ಸಾಧಿಸಿದವನು. | | |
| 7. ಸುಕುಮಾರಸ್ವಾಮಿಯು ಕೋಟ್ಯಧೀಶನಾಗಿದ್ದನು. | | |
| 8. ಕಾಲಪಕ್ಷಿಯು ಮನ್ವಂತರಗಳ ಭಾಗ್ಯವ ತೆರೆಸಿದೆ. | | |
| 9. ರಿಷಿಯು ತಪಸ್ಸಿನಿಂದ ಅರಿಷಡ್ವರ್ಗಗಳನ್ನು ಗೆಲ್ಲುತ್ತಾನೆ. | | |
| 10. ಅಬ್ಧಿಪನು ವಾಲ್ಮೀಕಿಯನ್ನು ಕರೆಸಿಕೊಂಡಿದ್ದಾನೆ. | | |
| 11. ಧ್ಯಾನವು ಮನಶ್ಶಾಂತಿಯನ್ನು ನೀಡುತ್ತದೆ. | | |
| 12. ಜಗಜ್ಜ್ಯೋತಿ ಬಸವಣ್ಣನವರು ಅಗ್ರಗಣ್ಯ ವಚನಗಾರರು. | | |
| 13. ರಾಜ ಪರಿವಾರದವರು ಬೃಹಚ್ಛತ್ರ ಚಾಮರಗಳನ್ನು ಹಿಡಿದಿದ್ದರು. | | |
| 14. ವೃಷಭಾಂಕನು ಸುಕುಮಾರಸ್ವಾಮಿಯ ವೈಭೋಗ ಕಂಡು ದಿಙ್ಮೂಢನಾದನು. | | |
| 15. ಯೋಗದಲ್ಲಿ ಚಿನ್ಮಯ ಮುದ್ರೆ ಸಹ ಒಂದು. | | |

| “ನಾಳೆಯಿಂದ ಸೂರ್ಯೋದಯವಾಗದಿದ್ದರೆ ಏನಾಗಬಹುದು? (ನಿಮ್ಮದೇ ಕಲ್ಪನೆಯಲ್ಲಿ ಬರೆಯಿರಿ) |
| --- |
| |
| |
| |
| |
| |
| |
| |
| |
| |
| |
| |
| |
| |

## ವಿದ್ಯಾರ್ಥಿಯ ಸ್ವ-ಮೌಲ್ಯಮಾಪನ

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
| --- | --- | --- | --- | --- |
| 1. | ಕನ್ನಡ ಸಂಧಿಗಳನ್ನು ಗುರುತಿಸಬಲ್ಲೇ | | | |
| 2. | ಸಂಸ್ಕೃತ ಸಂಧಿಗಳನ್ನು ಗುರುತಿಸಬಲ್ಲೇ | | | |
| 3. | ವಾಕ್ಯಗಳಲ್ಲಿರುವ ಸಂಧಿ ಪದಗಳು ಗುರುತಿಸಿ ಬಿಡಿಸಿ ಬರೆದು, ಸಂಧಿ ಹೆಸರಿಸಬಲ್ಲೇ | | | |

**ಶಿಕ್ಷಕರ ಅಭಿಪ್ರಾಯ**

| ಅತ್ಯುತ್ತಮ | | ಉತ್ತಮ | | ಸಾಧಾರಣ | |
| --- | --- | --- | --- | --- | --- |

# 6 ಸಮಾಸಗಳು

| ಸಮಾಸಗಳು | ಮುಖ್ಯಾಂಶಗಳು |
|---|---|
| ತತ್ಪುರುಷ ಸಮಾಸ | ಎರಡು ನಾಮಪದ, ಉತ್ತರ ಪದದ ಅರ್ಥ ಪ್ರಧಾನವಾಗುಳ್ಳದ್ದು. |
| ಕರ್ಮಧಾರಯ ಸಮಾಸ | ವಿಶೇಷಣ – ವಿಶೇಷ್ಯ ಸಂಬಂಧ, ಲಿಂಗ, ವಚನ, ವಿಭಕ್ತಿ ಸಮಾನವಾಗಿರುವುದು. |
| ಅಂಶಿ ಸಮಾಸ | ಅಂಶ – ಅಂಶಿ ಸಂಬಂಧ, ಅಂಶ– ಭಾಗ, ಅಂಶಿ – ಪೂರ್ಣ. |
| ಕ್ರಿಯಾ ಸಮಾಸ | ಪೂರ್ವ ಪದ ದ್ವಿತೀಯ ವಿಭಕ್ತ್ಯಂತ್ಯವಾಗಿ, ಉತ್ತರ ಪದದಲ್ಲಿ ಧಾತುವಿರುವುದು. |
| ದ್ವಿಗು ಸಮಾಸ | ಸಂಖ್ಯಾ ವಾಚಕಗಳು – ನಾಮಪದಗಳಿಂದ ಕೂಡಿರುವುದು. |
| ದ್ವಂದ್ವ ಸಮಾಸ | ಎಲ್ಲಾ ಪದಗಳ ಅರ್ಥ ಪ್ರಧಾನವಾಗಿರುವುದು. |
| ಬಹುವ್ರೀಹಿ ಸಮಾಸ | ಮೂರನೆಯ ಪದದ ಅರ್ಥ ಪ್ರಧಾನವಾಗಿರುವುದು. |
| ಗಮಕ ಸಮಾಸ | ಪೂರ್ವ ಪದ ಸರ್ವನಾಮ ಅಥವಾ ಕೃದಂತ + ನಾಮಪದಗಳಿಂದ ಕೂಡಿರುತ್ತದೆ. |

**ಅ. ಕೊಟ್ಟಿರುವ ಸಮಾಸ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸದ ಹೆಸರನ್ನು ಬರೆಯಿರಿ.**

| ಮಾದರಿ: ಕಾಲುಬಳೆ | ಕಾಲಿನ ಬಳೆ | ತತ್ಪುರುಷ |
|---|---|---|
| ಕಿರುಗೆಜ್ಜೆ | | |
| ಮುಂದಲೆ | | |
| ನಾಲ್ವಡಿ | | |
| ಕಣ್ದೆರೆ | | |
| ಅಣ್ಣತಮ್ಮಂದಿರು | | |
| ಗಂಗಾಧರ | | |
| ಆ ಹುಡುಗಿ | | |

ಸಂಸ್ಕೃತ ಪದ ಮತ್ತು ಕನ್ನಡ ಪದ ಸೇರಿಸಿ ಸಮಾಸ ಮಾಡಬಾರದು. ಪೂರ್ವ ಕವಿಗಳು ಈ ರೀತಿಯ ಸಮಾಸಗಳನ್ನು ಮಾಡಿ ಬಳಸಿದ್ದರೆ ಅದು ದೋಷವಲ್ಲ. ಅಂತಹ ಸಮಾಸಗಳನ್ನು 'ಅರಿ ಸಮಾಸ' ಎಂದು ಕರೆಯುವರು. ಬಿರುದಾವಳಿಗಳಲ್ಲಿ ಕ್ರಿಯಾ ಸಮಾಸ ಮತ್ತು ಗಮಕ ಸಮಾಸಗಳಲ್ಲಿ ಇದು ಬಂದರೆ ದೋಷವಿಲ್ಲ.

**ಆ. ಕೊಟ್ಟಿರುವ ಸಮಾಸ ಪದಗಳನ್ನು ಕೂಡಿಸಿ ಬರೆದು ಸಮಾಸದ ಹೆಸರನ್ನು ಬರೆಯಿರಿ.**

| ವಿಗ್ರಹವಾಕ್ಯ | ಸಮಸ್ತ ಪದ | ಸಮಾಸದ ಹೆಸರು |
|---|---|---|
| ಮಳೆಯ + ಕಾಲ | | |
| ಪೀತವಾದ + ಅಂಬರ | | |

| | | |
|---|---|---|
| ಕಾಲಿನ + ಮುಂದು | | |
| ಎರಡು + ಮಡಿ | | |
| ಮೈಯನ್ನು + ತಡವಿ | | |
| ರಾಮನೂ + ಲಕ್ಷ್ಮಣನೂ | | |
| ಇದು + ಪುಸ್ತಕ | | |

**ಇ. ಕೊಟ್ಟಿರುವ ವಾಕ್ಯದಲ್ಲಿರುವ ಸಮಾಸ ಪದಕ್ಕೆ ಅಡಿಗೆರೆ ಎಳೆದು, ಸಮಾಸದ ಹೆಸರು ಬರೆಯಿರಿ.**

| ವಾಕ್ಯಗಳು | ಸಮಾಸ |
|---|---|
| ಈ ದಿನ ಶಿಕ್ಷಕರು ರನ್ನ ಕವಿ ಬರೆದಿರುವ ಹಳಗನ್ನಡ ಪದ್ಯವನ್ನು ಮಾಡಿದರು. | |
| ಮೈಸೂರು ಅರಮನೆಯ ನಗರ. | |
| ವಸಂತ ಮಹಲ್ಲಿನ ಆವರಣದಲ್ಲಿರುವ ಮರದಲ್ಲಿ ಹೆಜ್ಜೇನು ಕಟ್ಟಿದೆ. | |
| ಮೈಸೂರು – ಬೆಂಗಳೂರು ಹೆದ್ದಾರಿಯ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು. | |
| ವಿಜಯಪುರದ ನಡುದಾರಿಯಲ್ಲಿ ನಮ್ಮ ವಾಹನ ಕೆಟ್ಟು ನಿಂತಿತು. | |
| ದಕ್ಷನ ಮಗಳಾದ ಪಾರ್ವತಿಯು ಮುಕ್ಕಣ್ಣನನ್ನು ವರಿಸಿದಳು. | |
| ಜಯನಗರದ ರಾಮಮಂದಿರದಲ್ಲಿ ಈ ದಿನ ಭಜನೆ ಇದೆ. | |
| ನಮ್ಮ ಶಾಲೆಯ ತೋಟದಲ್ಲಿ ಗಿಡಮರಬಳ್ಳಿಗಳು ಇವೆ. | |
| ಶ್ರೀರಂಗ ಪಟ್ಟಣದ ಇಕ್ಕೆಲಗಳಲ್ಲಿ ಕಾವೇರಿ ನದಿ ಹರಿಯುತ್ತದೆ. | |
| ನಮ್ಮೂರಿನ ಕೆರೆಯಲ್ಲಿ ಕೆಂದಾವರೆಗಳು ಅರಳಿವೆ. | |

**ಈ. ಕೊಟ್ಟಿರುವ ಕವಿಗಳ ಹೆಸರನ್ನು ವಿಸ್ತರಿಸಿ ಬರೆಯಿರಿ.**

| ಕವಿಗಳು | ಕವಿಗಳ ಪೂರ್ಣ ಹೆಸರು |
|---|---|
| ಮಾದರಿ: ಕುವೆಂಪು | ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ |
| ಡಿ.ವಿ.ಜಿ | |
| ತೀ.ನಂ.ಶ್ರೀ | |
| ಪು.ತಿ.ನ | |
| ಬಿ.ಎಂ.ಶ್ರೀ | |
| ಎಂ.ಆರ್.ಶ್ರೀ | |
| ಪೂ.ಚಂ.ತೇ | |

| | |
|---|---|
| ದ.ರಾ.ಬೇಂದ್ರೆ | |
| ತ.ರಾ.ಸು | |
| ಅ.ನ.ಕೃ | |
| ಜಿ.ಎಸ್.ಎಸ್ | |
| ಗೊ.ರೂ.ಚ. | |
| ಹಾ.ಮಾ.ನಾ | |

**ಉ. ಕೊಟ್ಟಿರುವ ಕಾವ್ಯನಾಮಗಳಿಗೆ ಸರಿ ಹೊಂದುವ ಕವಿಗಳ ಹೆಸರನ್ನು ಬರೆಯಿರಿ.**

| ಕಾವ್ಯನಾಮ | ಕವಿಗಳ ಹೆಸರು |
|---|---|
| ಅಂಬಿಕಾತನಯದತ್ತ | ದ.ರಾ.ಬೇಂದ್ರೆ |
| ಶ್ರೀನಿವಾಸ | |
| ವಿನಾಯಕ | |
| ಬೀಚಿ | |
| ಮುದ್ದಣ | |
| ಕಾವ್ಯಾನಂದ | |
| ಕವಿಶಿಷ್ಯ | |

## ವಿದ್ಯಾರ್ಥಿಯ ಸ್ವ-ಮೌಲ್ಯಮಾಪನ

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ಸಮಾಸದ ವಿಧಗಳನ್ನು ಹೆಸರಿಸಬಲ್ಲೆ | | | |
| 2 | ಸಮಾಸ ಪದಗಳ ವಿಗ್ರಹ ವಾಕ್ಯ ಮಾಡಬಲ್ಲೆ | | | |
| 3 | ವಾಕ್ಯಗಳಲ್ಲಿರುವ ಸಮಾಸ ಪದಗಳನ್ನು ಗುರುತಿಸಿ. ವಿಗ್ರಹ ವಾಕ್ಯಮಾಡಿ, ಹೆಸರನ್ನು ಹೇಳಬಲ್ಲೆ | | | |

**ಶಿಕ್ಷಕರ ಅಭಿಪ್ರಾಯ**

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 2 ಕಿರುಪರೀಕ್ಷೆ

**ಅ. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರದಿಂದ ತುಂಬಿರಿ.**

1. 'ಸುರಿ' ಧಾತುವಿನ ವಿಧ್ಯರ್ಥಕ ರೂಪ ____________________
2. 'ಹಾಡು' ಧಾತುವಿನ ನಿಷೇಧಾರ್ಥಕ ರೂಪ ____________________
3. 'ಚೆಲ್ಲುತ್ತದೆ' ಪದದಲ್ಲಿರುವ ಕಾಲ ಸೂಚಕ ಪ್ರತ್ಯಯ ____________________
4. 'ಅಬ್ಬರಿಸು' ಪದದಲ್ಲಿ ____________ ಪ್ರತ್ಯಯವಿದೆ.
5. 'ಚಕ್ರಗಳು ಗಿರಗಿರನೆ ತಿರುಗುವವು' ವಾಕ್ಯವು ಪ್ರಯೋಗಗೊಂಡಿರುವ ಕಾಲ __________ ಆಗಿದೆ.

**ಆ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕಿರುವ ಸಂಬಂಧೀ ಪದವನ್ನು ಬರೆಯಿರಿ.**

1. ಇರುಳಿರುಳು : ಲೋಪಸಂಧಿ : : ಮಳೆಗಾಲ : ____________________
2. ವಿದ್ಯಾರ್ಥಿ : ಸವರ್ಣದೀರ್ಘ : : ಮಹೇಶ್ವರ : ____________________
3. ಮನ್ವಂತರ : ಯಣ್ ಸಂಧಿ : : ದಿವ್ಯೌಷಧ : ____________________
4. ವಾಗ್ದೇವಿ : ಜಶ್ತ್ವ ಸಂಧಿ : : ಸಚ್ಚಿತ್ರ : ____________________
5. ಪಯಶ್ಶಯನ : ಶ್ಚುತ್ವ ಸಂಧಿ : : ಚಿನ್ಮಯ : ____________________

**ಇ. ಹೊಂದಿಸಿ ಬರೆಯಿರಿ.**

| ಅ ಪಟ್ಟಿ | ಬ ಪಟ್ಟಿ | ಉತ್ತರಗಳು |
|---|---|---|
| ರಣಶೂರ | ಗಮಕ ಸಮಾಸ | |
| ಸಿಡಿಮದ್ದು | ಕರ್ಮಧಾರಯ ಸಮಾಸ | |
| ಮೆಲ್ನುಡಿ | ತತ್ಪುರುಷ ಸಮಾಸ | |
| ದಶದಿಕ್ಕು | ಅಂಶಿ ಸಮಾಸ | |
| ನಡುನೆತ್ತಿ | ದ್ವಿಗು ಸಮಾಸ | |

**ಈ. ಕೊಟ್ಟಿರುವ ಧಾತುಗಳಿಗೆ ಕ್ರಿಯಾರ್ಥಕ ರೂಪಗಳನ್ನು ಬಳಸಿ ಅರ್ಥಪೂರ್ಣ ವಾಕ್ಯ ರಚಿಸಿರಿ.**

1. ಹರಡು : ವಿಧ್ಯರ್ಥಕ ______________________________.

ಸಂಭಾವನಾರ್ಥಕ ______________________________.

ನಿಷೇಧಾರ್ಥಕ ______________________________.

2. ಒಪ್ಪು : ವಿಧ್ಯರ್ಥಕ ______________________________.

ಸಂಭಾವನಾರ್ಥಕ ______________________________.

ನಿಷೇಧಾರ್ಥಕ ______________________________.

3. ನೋಡು : ವಿಧ್ಯರ್ಥಕ ______________________________.

ಸಂಭಾವನಾರ್ಥಕ ______________________________.

ನಿಷೇಧಾರ್ಥಕ ______________________________.

4. ಕೇಳು : ವಿಧ್ಯರ್ಥಕ ______________________________.

ಸಂಭಾವನಾರ್ಥಕ ______________________________.

ನಿಷೇಧಾರ್ಥಕ ______________________________.

5. ಓದು : ವಿಧ್ಯರ್ಥಕ ______________________________.

ಸಂಭಾವನಾರ್ಥಕ ______________________________.

ನಿಷೇಧಾರ್ಥಕ ______________________________.

**ಶಿಕ್ಷಕರ ಅಭಿಪ್ರಾಯ**

| | | | | | |
|---|---|---|---|---|---|
| **ಅತ್ಯುತ್ತಮ** | | **ಉತ್ತಮ** | | **ಸಾಧಾರಣ** | |

# 7 ಪದಗಳು

**ಅ. ಕೊಟ್ಟಿರುವ ಪದಗಳನ್ನು ಅಕಾರಾದಿಯಾಗಿ ಬರೆದು, ನಿಘಂಟನ್ನು ಬಳಸಿಕೊಂಡು ಅರ್ಥ ಬರೆಯಿರಿ.**

| | | | | |
|---|---|---|---|---|
| ಅರ್ತಿ | ತೃಷೆ | ಹಳುವು | ಹುರುಳು | ಬನ್ನ |
| ಸುರಭಿ | ಅಸುರ | ಒಡಂಬಟ್ಟು | ಪಳುವಗೆ | ಚೋದ್ಯಂಬಟ್ಟು |
| ಕುತ್ತ | ಪಸದನ | ಅಮರ್ದು | ಗಡಣ | ದೃಗುಜಲ |
| ಸಿಗ್ಗು | ಅಟಿಲ್ | ಇಳೆ | ತೊಟಿಲ್ದು | ಏಟೆಸಿದ |

| | | |
|---|---|---|
| 1. | | |
| 2. | | |
| 3. | | |
| 4. | | |
| 5. | | |
| 6. | | |
| 7. | | |
| 8. | | |
| 9. | | |
| 10. | | |
| 11. | | |
| 12. | | |
| 13. | | |
| 14. | | |
| 15. | | |
| 16. | | |
| 17. | | |
| 18. | | |
| 19. | | |
| 20. | | |

**ಆ. ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧನ್ನು ಗುರುತಿಸಿ, ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ**

1. ಭೂಮಿಜಾತೆ : ಸೀತೆ :: ಸೌಮಿತ್ರಿ : ________
2. ಉದರಮುಖ : ಕಬಂಧ :: ರಾಜೀವಸಖ : ________
3. ನೇಸರ್ : ಸೂರ್ಯ :: ಮೇದಿನಿ : ________
4. ಇನತನೂಜ : ಕರ್ಣ :: ಕೌರವೇಂದ್ರ : ________
5. ಪಡಿಯಱ : ದ್ವಾರಪಾಲಕ :: ತಳಾರ : ________
6. ಅಬ್ಜೋದರ : ವಿಷ್ಣು :: ಅಬ್ಧಿಪ : ________
7. ವಾಜಿ : ಕುದುರೆ :: ಪನ್ನಗ : ________
8. ಫಲ್ಗುಣ : ಅರ್ಜುನ :: ಭಾರ್ಗವ : ________
9. ಬಳಾರಿ : ಮಾರಿ :: ಮುರಾರಿ : ________
10. ಅಂತಕಾತ್ಮಜ : ಧರ್ಮರಾಯ :: ಕುಂಭಸಂಭವ : ________

**ಇ. ಕೊಟ್ಟಿರುವ ಪದಗಳಿಗೆ ಹೊಸಗನ್ನಡ ರೂಪವನ್ನು ಬರೆಯಿರಿ.**

| | ಹಳಗನ್ನಡ ರೂಪ | ಹೊಸಗನ್ನಡ ರೂಪ | | ಹಳಗನ್ನಡ ರೂಪ | ಹೊಸಗನ್ನಡ ರೂಪ |
|---|---|---|---|---|---|
| 1 | ತೋರ್ವ | | 6 | ಅಪ್ಪುದಱಿಂ | |
| 2 | ಪೇಳಿರಿ | | 7 | ಪಾರ್ವ | |
| 3 | ಪೊಗಳು | | 8 | ಪುಟ್ಟಿದಂ | |
| 4 | ಇರ್ವರ್ | | 9 | ಪಸುರು | |
| 5 | ಪೊಳ್ತು | | 10 | ಎಮ್ಮನ್ | |

## ಈ. ಕೊಟ್ಟಿರುವ ಪದಗಳ ಅರ್ಥ ವ್ಯತ್ಯಾಸ ತಿಳಿದು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ.

**ಮಾದರಿ:** ಪ್ರಧಾನ ---> ಭಾರತದ ಸಂವಿಧಾನದ ಪ್ರಕಾರ ಪ್ರಧಾನ ಮಂತ್ರಿಯು ಆಡಳಿತ ಪಕ್ಷದ ನಾಯಕರಾಗಿರುತ್ತಾರೆ.

ಪ್ರದಾನ ---> ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

1. ಮಧ್ಯ ---> ______________________________ .

   ಮದ್ಯ ---> ______________________________ .

2. ಮರುಳು ---> ______________________________ .

   ಮರಳು ---> ______________________________ .

3. ಹುಲಿ ---> ______________________________ .

   ಉಲಿ ---> ______________________________ .

4. ಅಂಧ ---> ______________________________ .

   ಅಂದ ---> ______________________________ .

5. ಶರ ---> ______________________________ .

   ಸರ ---> ______________________________ .

## ಉ. ಕೊಟ್ಟಿರುವ ಪದಗಳನ್ನು ನಾಮಪದ ಮತ್ತು ಕ್ರಿಯಾಪದವಾಗಿ ಪ್ರಯೋಗಿಸಿ ವಾಕ್ಯ ರಚಿಸಿ.

| | |
|---|---|
| **ಮಾದರಿ:** ಹೊಳೆ | ಪರಿಸರ ಸಮತೋಲನದಲ್ಲಿ ಹೊಳೆಯ ಪಾತ್ರ ಅತಿ ಮುಖ್ಯ. |
| | ಮದುಮಗಳು ತೊಟ್ಟಿರುವ ವಜ್ರದ ಉಂಗುರವು ಫಳಫಳನೆ ಹೊಳೆಯುತ್ತಿದೆ. |
| ನುಡಿ | |
| | |
| ಕಾಡು | |
| | |
| ಕಲಿ | |
| | |

| | |
|---|---|
| ಕುಡಿ | |
| | |
| ಹಾಡು | |
| | |
| ಹರಿ | |
| | |

**ಊ. ಕೊಟ್ಟಿರುವ ವಾಕ್ಯಗಳಲ್ಲಿರುವ ಆಡುನುಡಿಯ ಪದಗಳನ್ನು ಗುರುತಿಸಿ, ಅವುಗಳಿಗೆ ಗ್ರಾಂಥಿಕ ರೂಪವನ್ನು ಮಾದರಿಯಂತೆ ಬರೆಯಿರಿ.**

| **ಮಾದರಿ:** ದುಃಖದ ಸುದ್ದಿ ಸಾಹೇಬನಿಗೆ ಹೋಯ್ತು. | **ಉತ್ತರ.** | ಹೋಯ್ತು | ಹೋಯಿತು. |
|---|---|---|---|
| 1. ಕಂಪನಿ ಸರ್ಕಾರದವರು ಇಸವಾಸ ಘಾತಕವನ್ನು ಮಾಡಿದರು. | **ಉತ್ತರ** | | |
| 2. ಕೆಂಪಣ್ಣನ ಅಂಗಡಿಯಲ್ಲಿ ಸಕ್ಕಾರಿ ಬೆಲ್ಲ ದೊರೆಯುತ್ತದೆ. | **ಉತ್ತರ** | | |
| 3. ಬ್ರಿಟಿಷ್ ಸೈನಿಕರು ಹಲಗಲಿ ಊರಿಗೆ ಬೆಂಕಿಯಿಟ್ಟು ಬೂದಿ ಮಾಡ್ತಾರೆ. | **ಉತ್ತರ** | | |
| 4. ಒಳಗಿಂದೊಳಗೆ ವಚನ ಕೊಟ್ಟರು ಬ್ಯಾಡರೆಲ್ಲ ಕಲೆತು. | **ಉತ್ತರ** | | |
| 5. ಹಲಗಲಿಯ ಮ್ಯಾಗ ಕುದರೆಯ ಮಂದಿ ದಾಳಿ ಮಾಡಿದರು. | **ಉತ್ತರ** | | |
| 6. ಬ್ರಿಟಿಷರು ಕಾಗದ ಬರೆದು ಕಳುವ್ಯಾರೆ. | **ಉತ್ತರ** | | |
| 7. ಬ್ರಿಟಿಷರು ಏನು ಉಳಿಯದ್ಹಂಗ ಹಲಗಲಿಯ ನಾಶ ಮಾಡಿದರು. | **ಉತ್ತರ** | | |
| 8. ಹಲಗಲಿಯ ಬೇಡರು ಕೈಗೆ ಸಿಕ್ಕಿದನ್ನು ತಗೊಂಡು ಸರಿದು ನಿಂತರು. | **ಉತ್ತರ** | | |
| 9. ಹಲಗಲಿಯು ಸುಟ್ಟು ಗುರ್ತು ಉಳಿಯಲಿಲ್ಲ ಎಳ್ಳಷ್ಟು. | **ಉತ್ತರ** | | |
| 10. ಸೈನಿಕರು ಗುಂಡು ಹೊಡೆದರು ಮುಂಗಾರು ಸಿಡಿಲು ಸಿಡಿದ್ಹಾಂಗ. | **ಉತ್ತರ** | | |

**ಋ. ಕೊಟ್ಟಿರುವ ಪದಗಳಿಗೆ ತದ್ಭವ ರೂಪಗಳನ್ನು ಬರೆಯಿರಿ.**

| | **ತತ್ಸಮ** | **ತದ್ಭವ** | | **ತತ್ಸಮ** | **ತದ್ಭವ** |
|---|---|---|---|---|---|
| 1 | ದೃಷ್ಟಿ | | 6 | ವಂಶ | |
| 2 | ವ್ಯಯ | | 7 | ಪಕ್ಷಿ | |

| | | | | | |
|---|---|---|---|---|---|
| 3 | ವ್ಯಾಪಾರಿ | | 8 | ವಿಜ್ಞಾನ | |
| 4 | ಕಾರ್ಯ | | 9 | ವಿದ್ಯಾ | |
| 5 | ದ್ಯೂತ | | 10 | ಚೀರಾ | |

ಎ. ಕೊಟ್ಟಿರುವ ಪದಗಳಿಗೆ ತತ್ಸಮ ರೂಪಗಳನ್ನು ಬರೆಯಿರಿ.

| | ತದ್ಭವ | ತತ್ಸಮ | | ತದ್ಭವ | ತತ್ಸಮ |
|---|---|---|---|---|---|
| 1 | ಅಮರ್ದು | | 6 | ಕೊಡಲಿ | |
| 2 | ಬಂಜೆ | | 7 | ಜಸ | |
| 3 | ಸೊಣಗ | | 8 | ಸಂದೆಯ | |
| 4 | ಹಸಾದ | | 9 | ದೀವಿಗೆ | |
| 5 | ಕಬ್ಬ | | 10 | ದಾತಾರ | |

ಏ. ಖಾಲಿ ಬಿಟ್ಟಿರುವ ಸ್ಥಳವನ್ನು ಸೂಕ್ತ ತತ್ಸಮ-ತದ್ಭವ ಪದಗಳಿಂದ ತುಂಬಿ ಬರೆಯಿರಿ.

| | ತತ್ಸಮ | ತದ್ಭವ | | ತತ್ಸಮ | ತದ್ಭವ |
|---|---|---|---|---|---|
| 1 | | ಮೊಗಸಾಲೆ | 6 | ಶ್ರೀ | |
| 2 | ರಾಜ | | 7 | | ಎಕ್ಕ |
| 3 | | ಹೂನ್ಯ | 8 | ಯಜ್ಞ | |
| 4 | ವಿಜ್ಞಾಪನೆ | | 9 | | ಬೊಮ್ಮ |
| 5 | | ಸೊದೆ | 10 | ಶುನಕ | |

**ಐ. ಕೊಟ್ಟಿರುವ ವಾಕ್ಯಗಳಲ್ಲಿರುವ ಅನ್ಯದೇಶ್ಯ ಪದಗಳನ್ನು ಗುರುತಿಸಿ, ಇದು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿದೆ ಎಂಬುದನ್ನು ತಿಳಿಸಿ, ಮಾದರಿಯಂತೆ ಬರೆಯಿರಿ.**

| ಮಾದರಿ: ಸರ್. ಎಂ.ವಿಶ್ವೇಶ್ವರಯ್ಯ ಅವರು ಮೈಸೂರಿನ ದಿವಾನರಾಗಿದ್ದರು. | ದಿವಾನ | ಪರ್ಷಿಯನ್ |
|---|---|---|
| 1. ರತ್ನಗಂಬಳಿಯ ಬೆಲೆ ಒಂದು ಲಕ್ಷ ದೀನಾರು. | | |
| 2. ರೈತನು ಜಮೀನಿನಲ್ಲಿ ವ್ಯವಸಾಯ ಮಾಡುತ್ತಾನೆ. | | |
| 3. ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕಾರಕ. | | |
| 4. ಧೂಮಪಾನ ಮಾಡುವುದರಿಂದ ದಮ್ಮುರೋಗ ಬರುತ್ತದೆ. | | |
| 5. ಜನರ ಆರೋಗ್ಯ ರಕ್ಷಣೆಗಾಗಿಯೇ ದವಾಖಾನೆ ಇದೆ. | | |
| 6. ಶಾಲೆಯಲ್ಲಿ ಮಕ್ಕಳು ಗಲೀಜು ಮಾಡಬಾರದು. | | |
| 7. ಮೈಸೂರಿನಲ್ಲಿ ಗಂಧದೆಣ್ಣೆ ಕಾರ್ಖಾನೆ ಇದೆ. | | |
| 8. ಮುಖ್ಯಮಂತ್ರಿಗಳು ಜನರಿಂದ ಅಹವಾಲು ಸ್ವೀಕರಿಸಿದರು. | | |
| 9. ಕೊಳೆಯಾಗಿರುವ ಬಟ್ಟೆಗಳನ್ನು ಸಾಬೂನಿನಿಂದ ಶುದ್ಧೀಕರಿಸಬೇಕು. | | |
| 10. ದಸರೆಯಲ್ಲಿ ಜನರು ಆನೆಯಿಂದ ಸಲಾಮು ಮಾಡಿಸಿಕೊಳ್ಳುತ್ತಾರೆ. | | |
| 11. ನವರಾತ್ರಿಯಂದು ಮೈಸೂರಿನಲ್ಲಿ ಮಹಾರಾಜರ ದರ್ಬಾರು ನಡೆಯುತ್ತದೆ. | | |
| 12. ಮಾರುಕಟ್ಟೆಯಲ್ಲಿ ದಲ್ಲಾಳಿಗಳು ರೈತರ ಶೋಷಣೆ ಮಾಡುತ್ತಾರೆ. | | |
| 13. ಚಿಕ್ಕ ಮಕ್ಕಳಿಗೆ ಅನಾನಸು ಹಣ್ಣೆಂದರೆ ಬಹಳ ಇಷ್ಟ. | | |
| 14. ರುದ್ರ ಪಟ್ಟಣದಲ್ಲಿ ಸಂಗೀತ ಕಚೇರಿ ನಡೆಯುತ್ತದೆ. | | |
| 15. ಮೈಸೂರಿನಲ್ಲಿ ಮಹಾರಾಣಿ ಅವರು ಕಾಲೇಜು ತೆರೆದರು. | | |

## ವಿದ್ಯಾರ್ಥಿಯ ಸ್ವ-ಮೌಲ್ಯಮಾಪನ

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ಪದಗಳನ್ನು ಅಕಾರಾದಿಯಾಗಿ ಬರೆಯಬಲ್ಲೇ | | | |
| 2 | ಆಡು ನುಡಿಗಳಿಗೆ ಗ್ರಾಂಥಿಕ ರೂಪಗಳನ್ನು ಬರೆಯಬಲ್ಲೇ | | | |
| 3 | ವಾಕ್ಯಗಳಲ್ಲಿರುವ ಅನ್ಯದೇಶ್ಯ ಪದಗಳನ್ನು ಗುರುತಿಸಬಲ್ಲೇ | | | |

**ಶಿಕ್ಷಕರ ಅಭಿಪ್ರಾಯ**

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 8 ದ್ವಿರುಕ್ತಿ ಮತ್ತು ಜೋಡುನುಡಿಗಳು

**ಅ. ಕೊಟ್ಟಿರುವ ಚೌಕಗಳಲ್ಲಿ ನೀವು ತಿಳಿದಿರುವ ದ್ವಿರುಕ್ತಿ ಮತ್ತು ಜೋಡುನುಡಿಗಳನ್ನು ಬರೆಯಿರಿ.**

| ದ್ವಿರುಕ್ತಿ | | ಜೋಡುನುಡಿ | |
|---|---|---|---|
| | | | |
| | | | |
| | | | |
| | | | |
| | | | |

**ಆ. ಕೊಟ್ಟಿರುವ ಗದ್ಯಭಾಗವನ್ನು ಓದಿ, ಅದರಲ್ಲಿರುವ ದ್ವಿರುಕ್ತಿ ಮತ್ತು ಜೋಡುನುಡಿಗಳನ್ನು ಪತ್ತೆ ಹಚ್ಚಿ ಪ್ರತ್ಯೇಕವಾಗಿ ಪಟ್ಟಿ ಮಾಡಿ.**

ಪರಿಸರದ ಸ್ವಚ್ಛತೆಯನ್ನು ಕಾಪಾಡಬೇಕಾಗಿರುವುದು ನಮ್ಮ ನಿಮ್ಮೆಲ್ಲರ ಹೊಣೆ. ಗಿಡಮರಗಳು ನಮಗೆ ಉತ್ತಮ ಗಾಳಿಯನ್ನು ಒದಗಿಸುತ್ತವೆ. ಆದ್ದರಿಂದ ಅವುಗಳನ್ನು ಹೆಚ್ಚುಹೆಚ್ಚು ಬೆಳೆಸಿ ಉಳಿಸಿಕೊಳ್ಳಬೇಕು. ಚಿಕ್ಕಚಿಕ್ಕ ಗಿಡಗಳೂ ಸಹ ಜೀವ ಸಂಕುಲಕ್ಕೆ ಆಮ್ಲಜನಕವನ್ನು ರಾಶಿರಾಶಿಯಾಗಿ ಒದಗಿಸುತ್ತವೆ. ಆದರೆ ಮಾನವ ತನ್ನ ಮಿತಿಮೀರಿದ ಆಸೆ ಆಕಾಂಕ್ಷೆಗಳನ್ನು ತೀರಿಸಿಕೊಳ್ಳಲು ಅರಣ್ಯಗಳನ್ನು ನಾಶಮಾಡಿ ಬಟಾಬಯಲು ಮಾಡುತ್ತಿದ್ದಾನೆ. ಇದು ಹೀಗೆಯೇ ಮುಂದುವರಿದರೆ ಮಳೆಯ ಕೊರತೆಯಾಗಿ ಹಳ್ಳಕೊಳ್ಳಗಳಲ್ಲೂ ನೀರಿಲ್ಲದಂತಾಗಿ ಕೊನೆಕೊನೆಗೆ ನಮ್ಮ ಸುತ್ತಮುತ್ತಲಿನ ಅಲ್ಪಸ್ವಲ್ಪ ಕಾಡುಗಳೂ ಬೆಂಗಾಡುಗಳಾಗಿ ಕಟ್ಟಕಡೆಗೆ ಜೀವಸಂಕುಲವೇ ವಿನಾಶವಾದರೂ ಆಶ್ಚರ್ಯಪಡಬೇಕಿಲ್ಲ.

| ದ್ವಿರುಕ್ತಿ | | ಜೋಡುನುಡಿ | |
|---|---|---|---|
| | | | |
| | | | |
| | | | |

**ಇ. ಕೊಟ್ಟಿರುವ ದ್ವಿರುಕ್ತಿಗಳನ್ನು ಬಳಸಿಕೊಂಡು ಅರ್ಥಪೂರ್ಣ ವಾಕ್ಯಗಳನ್ನು ರಚಿಸಿ.**

**ಮಾದರಿ:** ಬೇಗಬೇಗ = ಗೆಳೆಯರೆ ಸೂರ್ಯಾಸ್ತವಾಗುತ್ತಿದೆ, ನಾವೆಲ್ಲರೂ ಬೇಗ ಬೇಗ ಹೆಜ್ಜೆಹಾಕಿ ಊರು ತಲುಪೋಣ.

- ನಡೆನಡೆ = ______________________________ .
- ಪ್ರಪ್ರಥಮ = ______________________________ .
- ಸಾಕುಸಾಕು = ______________________________ .


- ಅಲ್ಲಲ್ಲಿ = ________________________________________ .
- ಹಣ್ಣುಹಂಪಲು = ________________________________________ .
- ಒಬ್ಬೊಬ್ಬ = ________________________________________ .
- ಅಹುದಹುದು = ________________________________________ .
- ಕೇರಿಕೇರಿ = ________________________________________ .
- ಕೊನೆಕೊನೆಗೆ = ________________________________________ .
- ಸರಿಸರಿ = ________________________________________ .
- ನೋಡಿನೋಡಿ = ________________________________________ .
- ಮುಂದೆಮುಂದೆ = ________________________________________ .
- ಸರಮಾಲೆ = ________________________________________ .
- ಹಾವಭಾವ = ________________________________________ .

**ಈ. ಕೊಟ್ಟಿರುವ ಜೋಡುನುಡಿಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ.**

- ಕಸಕಡ್ಡಿ = ________________________________________ .
- ಬೇವುಬೆಲ್ಲ = ________________________________________ .
- ಕಾಸುಕರಿಮಣಿ = ________________________________________ .
- ಕಾಫಿಗೀಫಿ = ________________________________________ .
- ಸಾಲಸೋಲ = ________________________________________ .
- ಬಟ್ಟೆಬರೆ = ________________________________________ .
- ಹಣ್ಣುಕಾಯಿ = ________________________________________ .
- ದನಕರು = ________________________________________ .
- ಮಕ್ಕಳು ಮರಿ = ________________________________________ .
- ಊಟೋಪಚಾರ= ________________________________________ .
- ಸೊಪ್ಪುಸದೆ = ________________________________________ .
- ಸತಿಪತಿ = ________________________________________ .
- ನಾನು ನೀನು = ________________________________________ .

- ನಾಡು ನುಡಿ = ______________________________________________ .
- ಕಲ್ಲುಮಣ್ಣು = ______________________________________________ .

**ಉ. ಕೊಟ್ಟಿರುವ ಚಿತ್ರವನ್ನು ಗಮನಿಸಿ, ದ್ವಿರುಕ್ತಿ ಹಾಗೂ ಜೋಡುನುಡಿಗಳನ್ನು ಒಳಗೊಂಡಂತೆ 8–10 ವಾಕ್ಯಗಳನ್ನು ಬರೆಯಿರಿ.**




______________________________________________

______________________________________________

______________________________________________

______________________________________________


______________________________________________

______________________________________________

______________________________________________

______________________________________________

______________________________________________



ಶಿಕ್ಷಕರ ಅಭಿಪ್ರಾಯ

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 9 ನುಡಿಗಟ್ಟುಗಳು

**ಅ. ನಿಮಗೆ ತಿಳಿದಿರುವ 06 ನುಡಿಗಟ್ಟುಗಳನ್ನು ಬರೆದು ಸ್ವಂತ ವಾಕ್ಯ ರಚಿಸಿ.**

1. ____________ = ______________________________
2. ____________ = ______________________________
3. ____________ = ______________________________
4. ____________ = ______________________________
5. ____________ = ______________________________
6. ____________ = ______________________________

**ಆ. ಕೊಟ್ಟಿರುವ ಗದ್ಯ ಭಾಗವನ್ನು ಓದಿಕೊಂಡು ನುಡಿಗಟ್ಟುಗಳನ್ನು ಗುರುತಿಸಿ ಅರ್ಥ ಬರೆಯಿರಿ.**

ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸು ಗಳಿಸಬೇಕಾದರೆ ಉತ್ತಮವಾದ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಅವುಗಳು ವಿದ್ಯಾರ್ಜನೆಗೆ ದಾರಿದೀಪಗಳಾಗುತ್ತವೆ. ಅದೆಷ್ಟೇ ಅನ್ಯ ವಿಚಾರಗಳು ಮನದಲ್ಲಿ ಮೂಡಿದರೂ ಅವುಗಳಿಗೆ ಸೊಪ್ಪು ಹಾಕದೆ ನಿರ್ದಿಷ್ಟ ಗುರಿಯೆಡೆಗೆ ಸಾಗಬೇಕು. ಆಗ ಮಾತ್ರ ಗುರಿಸಾಧಿಸಿ ದಡ ಮುಟ್ಟಲು ಸಾಧ್ಯವಾಗುತ್ತದೆ. ಗುರುಹಿರಿಯರ ಮಾತಿಗೆ ಬೆಲೆಕೊಟ್ಟು ಅವರು ತೋರಿದ ದಾರಿಯಲ್ಲಿ ನಡೆದರೆ ಯಶಸ್ಸು ಕಟ್ಟಿಟ್ಟ ಬುತ್ತಿ. ಸಾಧನೆಯ ಪಥದಲ್ಲಿ ಸಾಗುವಾಗ ಹಲವಾರು ಎಡರು ತೊಡರುಗಳು ಬಂದು ನಮ್ಮನ್ನು ದಾರಿತಪ್ಪಿಸಲು ಯತ್ನಿಸುತ್ತವೆ. ಆದರೆ ನಾವು ಅವುಗಳ ಕಪಿಮುಷ್ಠಿಗೆ ಸಿಲುಕದೆ ಮುನ್ನುಗಬೇಕು. ಸ್ವಾಮಿ ಜಗದಾತ್ಮಾನಂದರು "ಪ್ರತಿನಿತ್ಯ ನಿಗದಿಪಡಿಸಿಕೊಂಡ ಕೆಲಸ ಕಾರ್ಯಗಳನ್ನು ಚಾಚುತಪ್ಪದೆ ಮಾಡುವುದರಿಂದ ನಮ್ಮ ಗುರಿಯನ್ನು ನಿಖರವಾಗಿ ಮುಟ್ಟಬಹುದು" ಎಂದಿದ್ದಾರೆ. ಇಲ್ಲವಾದರೆ ನಮ್ಮ ಕಾರ್ಯಗಳೆಲ್ಲವೂ ಹಳ್ಳ ಹಿಡಿದು ವಿದ್ಯಾರ್ಥಿ ಜೀವನ ವ್ಯರ್ಥವಾಗಿ ಜೀವನದಲ್ಲಿ ತಲೆ ಎತ್ತಿ ನಿಲ್ಲುವುದು ಕಷ್ಟವಾಗುತ್ತದೆ.

| ನುಡಿಗಟ್ಟು | ನುಡಿಗಟ್ಟಿನ ಅರ್ಥ |
|---|---|
| | |
| | |
| | |
| | |
| | |

'ನುಡಿಗಟ್ಟು' ಎಂದರೆ ಭಾಷೆಗೆ ವಿಶಿಷ್ಟವಾದ ಮಾತಿನ ಜೋಡಣೆ ಮಾತಿಗೊಂದು ಒಕ್ಕಣೆ ಎಂದರ್ಥ. ನುಡಿಯ ಕಟ್ಟು, ನುಡಿಗೆ ಕಟ್ಟು ಎಂದಿದರ ಬಿಡಿಸುವಿಕೆ. ಎರಡು, ಅದಕ್ಕಿಂತ ಹೆಚ್ಚಿನ ಪದಗಳು ಸೇರಿ ವಿಶಿಷ್ಟವಾದ ನಿಶ್ಚಿತ ರೂಪದ ಮತ್ತೊಂದು ಅರ್ಥ ನೀಡುವ ಪದಗಳೇ 'ನುಡಿಗಟ್ಟುಗಳು'. ಇವು ಭಾಷೆಯ ಸೌಂದರ್ಯವನ್ನು ಹೆಚ್ಚಿಸುತ್ತವೆ.

| | |
|---|---|
| | |
| | |
| | |
| | |
| | |

## ಇ. ಕೊಟ್ಟಿರುವ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ.

1. ಸಿಂಹಪಾಲು = ______________________
2. ಕಣ್ಣಿಡು = ______________________
3. ತಲೆದೂಗು = ______________________
4. ಎತ್ತಿದ ಕೈ = ______________________
5. ತಲೆತಿನ್ನು = ______________________

## ಈ. ಕೊಟ್ಟಿರುವ ವಾಕ್ಯಗಳಿಗೆ ಸೂಕ್ತವಾಗುವ ನುಡಿಗಟ್ಟುಗಳನ್ನು ಆರಿಸಿ ಬರೆಯಿರಿ.

[ಅಟ್ಟಕ್ಕೆ, ಎಳ್ಳಷ್ಟು ಕಗ್ಗಂಟು ಕಲ್ಲುಹಾಕು ಬೆನ್ನುಹತ್ತಿ ಕಪಿಮುಷ್ಟಿ ಎತ್ತಂಗಡಿ ಅಳಿಲುಸೇವೆ ಅನ್ನಕಿತ್ತುಕೊ]

1. ನಮ್ಮ ಅಣ್ಣ ನನ್ನನ್ನು ಹೊಗಳಿ ಹೊಗಳಿ ____________ ಏರಿಸಿದನು.
2. ನಾವು ಬೇರೆಯವರಿಗೆ ಸಹಾಯ ಮಾಡಲಾಗದಿದ್ದರೂ, ಅವರ ಕೆಲಸಕ್ಕೆ ____________ ಬಾರದು.
3. ಭಾರತವು ಹಲವು ವರ್ಷಗಳ ಕಾಲ ಬ್ರಿಟಿಷರ ____________ ಯಲ್ಲಿ ಸಿಲುಕಿಕೊಂಡಿತ್ತು.
4. ನಮ್ಮ ದೇಶದ ಅಭಿವೃದ್ಧಿಗೆ ನಾವು ____________ ಯನ್ನಾದರೂ ಸಲ್ಲಿಸಬೇಕು.
5. ವಿದ್ಯಾರ್ಥಿ ಜೀವನದಲ್ಲಿ ಗುರಿಮುಟ್ಟ ಬೇಕಾದರೆ ಸೋಮಾರಿತನಕ್ಕೆ ____________ ಅವಕಾಶ ನೀಡಬಾರದು.
6. ನಾವು ಗುರಿಯ ____________ ಯಶಸ್ಸನ್ನು ಗಳಿಸಬಹುದು.
7. ತಾಲೂಕು ಕಚೇರಿಯಲ್ಲಿದ್ದ ಗುಮಾಸ್ತನು ಸರಿಯಾಗಿ ಕೆಲಸಮಾಡದೆ ಇದ್ದುದರಿಂದ ಅವನನ್ನು ____________ ಮಾಡಿದರು.
8. ಕಾವೇರಿ ನೀರಿನ ಸಮಸ್ಯೆಯು ಶತಶತಮಾನಗಳಿಂದಲೂ ಕರ್ನಾಟಕ ಮತ್ತು ತಮಿಳುನಾಡಿನ ಮಧ್ಯೆ ____________ ಉಳಿದಿದೆ.

ಉ. ಕೊಟ್ಟಿರುವ ಅಂಕಿತನಾಮಗಳು ಯಾವ ವಚನಕಾರರದ್ದೆಂದು ಗುರುತಿಸಿ ಬರೆಯಿರಿ.

| ವಚನಕಾರರ ಅಂಕಿತನಾಮ | ವಚನಕಾರರು | ವಚನಕಾರರ ಅಂಕಿತನಾಮ | ವಚನಕಾರರು |
|---|---|---|---|
| ಮಾದರಿ: ಕೂಡಲಸಂಗಮದೇವ | ಬಸವಣ್ಣ | ಅಮುಗೇಶ್ವರ | |
| ಸೌರಾಷ್ಟ್ರ ಸೋಮೇಶ್ವರ | | ಕೂಡಲ ಚೆನ್ನಸಂಗಯ್ಯ | |
| ಉರಿಲಿಂಗದೇವ | | ಚೆನ್ನಮಲ್ಲಿಕಾರ್ಜುನ | |
| ಸಂಗಮೇಶ್ವರದ ಲಿಂಗ | | ಸಕಳೇಶ್ವರ ದೇವ | |
| ರಾಮನಾಥ | | ಅಮರೇಶ್ವರ ಲಿಂಗ | |
| ಅಂಬಿಗರ ಚೌಡಯ್ಯ | | ಅಜಗಣ್ಣ ತಂದೆ | |
| ಗುಹೇಶ್ವರ | | ಕಲಿದೇವರ ದೇವ | |
| ಕಪಿಲಸಿದ್ಧ ಮಲ್ಲಿಕಾರ್ಜುನ | | ಬಸವ | |
| ರಾಮೇಶ್ವರ ಲಿಂಗ | | ಶಂಭುಜಕೇಶ್ವರಾ | |
| ನಿಃಕಳಂಕ ಮಲ್ಲಿಕಾರ್ಜುನ | | ಸಂಗವ ಬಸವಣ್ಣ | |
| ಅರ್ಕೇಶ್ವರ ಲಿಂಗ | | ಅಭಿನವ ಮಲ್ಲಿಕಾರ್ಜುನ | |

## ವಿದ್ಯಾರ್ಥಿಯ ಸ್ವ-ಮೌಲ್ಯಮಾಪನ

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ವಾಕ್ಯದಲ್ಲಿರುವ ದ್ವಿರುಕ್ತಿಗಳನ್ನು ಗುರುತಿಸಬಲ್ಲೇ | | | |
| 2 | ವಾಕ್ಯದಲ್ಲಿರುವ ಜೋಡುನುಡಿಗಳನ್ನು ಗುರುತಿಸಬಲ್ಲೇ | | | |
| 3 | ವಾಕ್ಯದಲ್ಲಿರುವ ನುಡಿಗಟ್ಟುಗಳ ಅರ್ಥವನ್ನು ವಿವರಿಸಬಲ್ಲೇ | | | |

### ಶಿಕ್ಷಕರ ಅಭಿಪ್ರಾಯ

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 10 ಅವ್ಯಯಗಳು

**ಅ. ಬಿಟ್ಟ ಸ್ಥಳಗಳನ್ನು ಆವರಣದಲ್ಲಿರುವ ಸೂಕ್ತ ಅವ್ಯಯಗಳಿಂದ ತುಂಬಿರಿ.**

| | | | | |
|---|---|---|---|---|
| ಚುರುಚುರು | ಮತ್ತು | ಅಬ್ಬಾ! | ಬಳಿಕ | ಹೌದು |
| ಕೂಡಲೇ | ಇದೇ | ಸುಯ್ಯನೇ | ಆಃ | ಬೇಗನೆ |

ನಮ್ಮ ಶಾಲೆಯಿಂದ ನಾವು ________ ನಮ್ಮ ಮಕ್ಕಳು ಗೋಪಾಲ ಸ್ವಾಮಿ ಬೆಟ್ಟಕ್ಕೆ ಪ್ರವಾಸ ಹೊರೆಟೆವು. ಮಕ್ಕಳು ____________ ಸಿದ್ಧರಾಗಿ ಬಂದಿದ್ದರು. ಬೆಳಗಿನ ಸುಳಿಗಾಳಿ ____________ ಬೀಸುತ್ತಿತ್ತು. ಮಕ್ಕಳು ________ ತುಂಬಾ ಚಳಿ ಎನ್ನುತ್ತಲೆ ಬಸ್ಸಿಗೆ ಹತ್ತಿದರು. ನಾವು ಬೆಟ್ಟವನ್ನು ತಲುಪಿದಾಗ ಬೆಳಿಗ್ಗೆ ಎಂಟು ಗಂಟೆಯಾಗಿತ್ತು. ನಮಗೆ ಮೊದಲು ಕಂಡದ್ದು ಹಿಮದಿಂದ ಅವೃತ್ತವಾದ ವೇಣುಗೋಪಾಲ ಸ್ವಾಮಿಯ ದೇವಾಲಯ ________ ಎಷ್ಟು ಸುಂದರವಾದ ದೃಶ್ಯ. ದೇವಾಲಯವನ್ನು ಪ್ರವೇಶಿಸಿ ನಾವು ಅನಿರ್ವಚನೀಯವಾದ ಆನಂದವನ್ನು ಅನುಭವಿಸಿದೆವು. ದೇವಾಲಯದಿಂದ ಹೊರಗೆ ಬಂದಾಗ ನಮಗೆಲ್ಲಾ ಹೊಟ್ಟೆ ____________ ಎನ್ನುತ್ತಿತ್ತು. ನಿಮಗೆಲ್ಲಾ ತಿಂಡಿ ಬೇಕೇ ಎಂದು ಮಕ್ಕಳನ್ನು ಕೇಳಿದಾಗ ____________ ಎಂದು ಎಲ್ಲರೂ ಒಕ್ಕೊರಲಿನಿಂದ ಕೂಗಿದರು. ತಿಂಡಿ ನೀಡಿದ ___________ ಅಲ್ಲಿನ ಪ್ರಕೃತಿ ಸೌಂದರ್ಯವನ್ನು ಮಕ್ಕಳೆಲ್ಲರೂ ಸುತ್ತಾಡುತ್ತಾ ಸವಿದರು. ಅಷ್ಟೊತ್ತಿಗಾಗಲೇ ಬಾಯಾರಿದ ಮಕ್ಕಳು ನೀರು ಕುಡಿದು ಮುಂದಿನ ಪ್ರಯಾಣಕ್ಕಾಗಿ __________ ನಮ್ಮ ಬಸ್ಸನ್ನು ಹುಡುಕಿದ ಮಕ್ಕಳು _______ ಎಂದು ಕೂಗಿ ನಮ್ಮನ್ನು ಕರೆದರು. ಬಸ್ ಹತ್ತಿದ ನಾವು ಬಂಡೀಪುರಕ್ಕೆ ಪಯಣ ಬೆಳೆಸಿದೆವು.

**ಆ. ಬಿಟ್ಟ ಸ್ಥಳಗಳನ್ನು ಸೂಕ್ತ ಅವ್ಯಯಗಳಿಂದ ತುಂಬಿರಿ.**

1. ಪಲ್ಲವಿಯು ____________ ಓದುತ್ತಾಳೆ. (ಸಾಮಾನ್ಯ ಅವ್ಯಯ)
2. ಮಂಜು ___________ ಗಣೇಶ ಇಬ್ಬರೂ ಒಳ್ಳೆಯ ಗೆಳೆಯರು. (ಸಂಬಂಧಾರ್ಥಕ ಅವ್ಯಯ)
3. ___________ ಈ ಹುಲಿಯು ಎಷ್ಟು ಭಯಂಕರವಾಗಿದೆ. (ಭಾವಸೂಚಕ ಅವ್ಯಯ)
4. ಅಲ್ಲಿ ಕಾಣುತ್ತಿದೆಯಲ್ಲಾ, ___________ ನನ್ನ ಮನೆ. (ಅವಧಾರಣಾರ್ಥಕ ಅವ್ಯಯ)
5. ನನಗೆ ಹೊಟ್ಟೆ ತುಂಬಿದ್ದರಿಂದ ನಾನು ಅಮ್ಮನಿಗೆ ತಿಂಡಿ __________ ಎಂದು ಹೇಳಿದೆ. (ಕ್ರಿಯಾರ್ಥಕ ಅವ್ಯಯ)

**ಇ. ಹೊಂದಿಸಿ ಬರೆಯಿರಿ.**

| ಅ ಪಟ್ಟಿ | ಬ ಪಟ್ಟಿ | ಉತ್ತರಗಳು |
|---|---|---|
| ಸಾಮಾನ್ಯಾವ್ಯಯ | ಛೇ! | |
| ಅನುಕರಣಾವ್ಯಯ | ಏ | |
| ಕ್ರಿಯಾರ್ಥಕಾವ್ಯಯ | ಆದರೆ | |
| ಸಂಬಂದಾರ್ಥಕಾವ್ಯಯ | ಸುಮ್ಮನೆ | |
| ಅವಧಾರಣಾರ್ಥಕಾವ್ಯಯ | ಪಟಪಟ | |
| ಭಾವಸೂಚಕಾವ್ಯಯ | ಬೇಕು | |
| | ಓಡಿದ | |

**ಈ. ಕೊಟ್ಟಿರುವ ಅವ್ಯಯಗಳನ್ನು ಅವುಗಳ ಸ್ಥಾನದಲ್ಲಿ ಬರೆಯಿರಿ.**

[ಓಹೋ! ಪಟಾರನೆ, ಆಃ, ಪರಪರ, ಹೀಗೆ, ಇಂತು, ಚಕ್ಕನೆ, ತಕ್ಷಣ, ದಪ್ಪನೆ, ಫಳಫಳ, ಹಃ, ಇಲ್ಲ, ಹೌದು, ಬೇಕು, ಅವನೂ ಯಾರೇ, ನಾನೂ, ಆದರೆ, ಹಾಗಾಗಿ, ಈಗಲೆ, ಜೋರಾಗಿ, ನೀನೇ, ಅಲ್ಲೇ, ಚಕಚಕ]

1. ಸಾಮಾನ್ಯಾರ್ಥಕಾವ್ಯಯ = ____________________
2. ಅನುಕರಣಾವ್ಯಯ = ____________________
3. ಭಾವಸೂಚಕಾವ್ಯಯ = ____________________
4. ಕ್ರಿಯಾರ್ಥಕಾವ್ಯಯ = ____________________
5. ಸಂಬಂದಾರ್ಥಕಾವ್ಯಯ = ____________________
6. ಅವಧಾರಣಾರ್ಥಕಾವ್ಯಯ = ____________________

**ಉ. ಕೊಟ್ಟಿರುವ ವಚನಗಳನ್ನು ರಚಿಸಿರುವ ವಚನಕಾರರನ್ನು ಹೆಸರಿಸಿ.**

| ವಚನಗಳು | ವಚನಕಾರರು |
|---|---|
| **ಮಾದರಿ:** ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ<br>ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ. | ಬಸವಣ್ಣ |

| | |
|---|---|
| ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ<br>ತನ್ನ ನೂಲು ತನ್ನನ್ನೇ ಸುತ್ತಿ ಸುತ್ತಿ ಸಾವ ತೆರನಂತೆ. | |
| ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ<br>ಜಾತಿ ವಿಜಾತಿ ಎನಬೇಡ ದೇವನೊಲಿದಾತನೇ ಜಾತ. | |
| ಆಸೆ ಎಂಬುದು ಅರಸಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ?<br>ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯಾ? | |
| ನುಡಿಯಲುಬಾರದು ಕೆಟ್ಟ ನುಡಿಗಳ, ನಡೆಯಲುಬಾರದು ಕೆಟ್ಟ ನಡೆಗಳ<br>ನುಡಿದರೇನು, ನುಡಿಯದಿರ್ದಡೇನು? ಹಿಡಿದ ವ್ರತ ಬಿಡದಿರಲು | |
| ಲಂಚವಂಚನಕ್ಕೆ ಕೈಯಾನದ ಭಾಷೆ<br>ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದರೆ<br>ನಾನು ಕೈ ಮುಟ್ಟಿ ಎತ್ತಿದೆನಾದರೆ<br>ನಿಮ್ಮಗೆ ನಿಮ್ಮ ಪ್ರಮಥರಾಣೆ | |
| ನುಡಿಯಬಹುದು ಅದ್ವೈತವನೊಂದು ಕೋಟಿ ವೇಳೆ<br>ಒಮ್ಮೆ ನಡೆಯಬಹುದೆ ನಿರ್ಧರವಾಗಿ ಸದ್ಭಕ್ತಿ ಸದಾಚಾರವ<br>ನುಡಿದಂತೆ ನಡೆವ ನಡೆದಂತೆ ನುಡಿವ ಸದ್ಭಕ್ತಿ ಸದಾಚಾರಯುಕ್ತರ<br>ಮಹಾತ್ಮರ ಪಾದವ ಹಿಡಿದು ಬದುಕಿಸಯ್ಯಾ | |

## ವಿದ್ಯಾರ್ಥಿಯ ಸ್ವ-ಮೌಲ್ಯಮಾಪನ

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ಅವ್ಯಯಗಳ ವಿಧಗಳನ್ನು ಹೆಸರಿಸಬಲ್ಲೇ | | | |
| 2 | ವಾಕ್ಯಗಳಲ್ಲಿರುವ ಅವ್ಯಯಗಳನ್ನು ಗುರುತಿಸಬಲ್ಲೇ | | | |
| 3 | ಅವ್ಯಯಗಳನ್ನು ಬಳಸಿ ವಾಕ್ಯಗಳನ್ನು ರಚಿಸಬಲ್ಲೇ | | | |

### ಶಿಕ್ಷಕರ ಅಭಿಪ್ರಾಯ

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 3 ಕಿರುಪರೀಕ್ಷೆ

**ಅ. ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗುರುತಿಸಿ ಮೂರನೆ ಪದಕ್ಕಿರುವ ಸಂಬಂಧವನ್ನು ಬರೆಯಿರಿ.**

1. ಭೂಮಿಜಾತೆ : ಸೀತೆ :: ಸೌಮಿತ್ರಿ : ________________ .
1. ಬ್ರಹ್ಮ : ಬೊಮ್ಮ :: ಅಕ್ಷರ : ________________ .
2. ಹೀಗೆ : ಸಾಮಾನ್ಯ ಅವ್ಯಯ :: ಅಲ್ಲ : ________________ .
3. ಸಕ್ಕಾರಿ : ಸಕ್ಕರೆ :: ಬ್ಯಾಡರು : ________________ .
4. ಪೆನ್ನು : ಇಂಗ್ಲೀಷ್ :: ಜಬರ್ದಸ್ತ್ : ________________ .

**ಆ. ಕೊಟ್ಟಿರುವ ತದ್ಭವಗಳಿಗೆ ತತ್ಸಮ ರೂಪ ಬರೆಯಿರಿ.**

1. ಜಸ = ________________
2. ಜೂಜು = ________________
3. ಬೇಹಾರಿ = ________________
4. ದೀವಿಗೆ = ________________
5. ಬೊಮ್ಮ = ________________
6. ಸೀರೆ = ________________
7. ತಾಣ = ________________
8. ಹಣತೆ = ________________
9. ಹಸಾದ = ________________
10. ಬಂಜೆ = ________________

**ಇ. ಕೊಟ್ಟಿರುವ ಶಬ್ದಗಳು ಯಾವ ಭಾಷೆಯಿಂದ ಬಂದಿವೆ ಎಂದು ಗುರುತಿಸಿ.**

1. ಸಲಾಮು = ________________
2. ಬಟಾಟೆ = ________________
3. ತಹಸಿಲ್ದಾರ್ = ________________
4. ಅಮಲ್ದಾರ್ = ________________
5. ಕಛೇರಿ = ________________
6. ಲಾಟೀನು = ________________
7. ದಲ್ಲಾಳಿ = ________________
8. ಗದ್ಯಾಣ = ________________
9. ನಕಲಿ = ________________
10. ತಂಬಾಕು = ________________
11. ತಾಲ್ಲೂಕು = ________________
12. ಸ್ಯಾನಿಟರಿ = ________________

**ಈ. ನೀವು ಓದಿದ ಗ್ರಾಮ್ಯ ಪದಗಳನ್ನು ಹಾಗೂ ಅವುಗಳಿಗೆ ಗ್ರಾಂಥಿಕ ರೂಪ ಬರೆಯಿರಿ.**

| | | | |
|---|---|---|---|
| ಇಸವಾಸ | | ಹೋಯ್ತು | |
| ಸಕ್ಕಾರಿ | | ಬಂತು | |
| ಕಳುವ್ಯಾರೆ | | ಗುರ್ತು | |

**ಉ. ಕೊಟ್ಟಿರುವ ದ್ವಿರುಕ್ತಿ ಹಾಗೂ ಜೋಡುನುಡಿಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ.**

1. ಪ್ರಪ್ರಥಮ = ____________________
2. ಹೆಚ್ಚೆಚ್ಚು = ____________________
3. ಅಕ್ಕಪಕ್ಕ = ____________________
4. ಬಟಾಬಯಲು = ____________________
5. ಒಳಗೊಳಗೆ = ____________________
6. ಹಸಿರು ತೋರಣ = ____________________

**ಊ. ಹೊಂದಿಸಿ ಬರೆಯಿರಿ.**

| ಅ ಪಟ್ಟಿ | ಬ ಪಟ್ಟಿ | ಉತ್ತರಗಳು |
|---|---|---|
| ಸಾಮಾನ್ಯಾವ್ಯಯ | ಅಬ್ಬಾ | |
| ಅನುಕರಣಾವ್ಯಯ | ಅಥವಾ | |
| ಭಾವಸೂಚಕಾವ್ಯಯ | ಹೌದು | |
| ಸಂಬಂಂದಾರ್ಥಕಾವ್ಯಯ | ಸುಮ್ಮನೆ | |
| ಕ್ರಿಯಾರ್ಥಕಾವ್ಯಯ | ಧಗಧಗ | |
| | ಅದೇ | |

**ಶಿಕ್ಷಕರ ಅಭಿಪ್ರಾಯ**

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

11

# ಕೃದಂತಗಳು

**ಅ. ಕೊಟ್ಟಿರುವ ಪದಗಳಲ್ಲಿನ ಧಾತುಗಳನ್ನು ಬೇರ್ಪಡಿಸಿ ಬರೆಯಿರಿ.**

1. ಮಾಡಿದ = ____________ 2. ಹೋಗುವ = ____________
3. ತಿಂದ = ____________ 4. ಬರೆಯುವ ____________
5. ನೋಡಿ = ____________ 6. ನೆನೆಪು ____________
7. ಕೊರೆತ = ____________ 8. ತಿಳಿವಳಿಕೆ = ____________
9. ಬರೆವಣಿಗೆ = ____________ 10. ಉಣ್ಣದೆ ____________

**ಸಾಧಿತ ನಾಮಪದಗಳು**

1. ಸಮಾಸಗಳು = ನಾಮಪದ + ನಾಮಪದ / ಕ್ರಿಯಾಪದ
2. ತದ್ಧಿತಾಂತಗಳು = ನಾಮ ಪ್ರಕೃತಿ + ತದ್ಧಿತ ಪ್ರತ್ಯಯ
3. ಕೃದಂತಗಳು = ಧಾತು + ಕೃತ್ ಪ್ರತ್ಯಯ

**ಆ. ಈ ಕೆಳಗಿನ ಬಿಡಿಸಿ ಬರೆದ ಪದಗಳಲ್ಲಿ ಕಾಲ ಸೂಚಕ ಪ್ರತ್ಯಯ ಮತ್ತು ಕೃತ್ ಪ್ರತ್ಯಯಗಳನ್ನು ಗುರುತಿಸಿ ಮತ್ತು ಪದಗಳನ್ನು ಕೂಡಿಸಿ ಬರೆಯಿರಿ:**

| ಬಿಡಿಸಿ ಬರೆದ ಪದ | ಧಾತು | ಕಾಲ ಸೂಚಕ ಪ್ರತ್ಯಯ | ಕೃತ್ ಪ್ರತ್ಯಯ | ಕೂಡಿಸಿ ಬರೆದ ಪದ |
|---|---|---|---|---|
| ಓದು+ದ+ಅ | | | | |
| ನಡೆ+ಉವ+ಅ | | | | |
| ಹಾಡು+ವ+ಅ | | | | |
| ಕೇಳು+ದ+ಅ | | | | |
| ಕುಣಿ+ದ+ಅ | | | | |
| ಬರೆ+ಉವ+ಅ | | | | |
| ನೋಡು+ದ+ಅ | | | | |

**ಇ. ಕೊಟ್ಟಿರುವ ಪ್ರಶ್ನೆಗಳಿಗೆ / ಅಪೂರ್ಣ ಹೇಳಿಕೆಗಳಿಗೆ ಪ್ರತಿಯೊಂದಕ್ಕೂ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

1. ಧಾತುಗಳಿಗೆ ಕರ್ತೃ ಮೊದಲಾದ ಅರ್ಥದಲ್ಲಿ ಸಾಮಾನ್ಯವಾಗಿ ಬರುವ ಕೃತ್ ಪ್ರತ್ಯಯ

ಅ) ಒ ಆ) ಉ ಇ) ಅ ಈ) ಎ

ಉ. ______________________________

2. ಧಾತುಗಳಿಗೆ ಕರ್ತೃ ಮೊದಲಾದ ಅರ್ಥದಲ್ಲಿ ಸಾಮಾನ್ಯವಾಗಿ ಬರುವ ಪ್ರತ್ಯಯಕ್ಕೆ ಹೀಗೆನ್ನುವರು:

ಅ) ಕೃತ್ ಪ್ರತ್ಯಯ ಆ) ತದ್ಧಿತ ಪ್ರತ್ಯಯ

ಇ) ವಿಭಕ್ತಿ ಪ್ರತ್ಯಯ ಈ) ಆಖ್ಯಾತ ಪ್ರತ್ಯಯ

ಉ. ______________________________

3. ಧಾತುವಿಗೂ ಕೃತ್ ಪ್ರತ್ಯಯಕ್ಕೂ ಮಧ್ಯದಲ್ಲಿ ವರ್ತಮಾನ ಭವಿಷ್ಯತ್ ಕಾಲದಲ್ಲಿ ಬರುವ ಕಾಲಸೂಚಕ ಪ್ರತ್ಯಯಗಳಿವು

ಅ) ದ, ಅದ ಆ) ವ, ಉವ

ಇ) ತ, ಉತ್ತ ಈ) ಉತ್ತ, ಆದ

ಉ. ______________________________

4. ಧಾತುವಿಗೂ ಕೃತ್ ಪ್ರತ್ಯಯಕ್ಕೂ ಮಧ್ಯದಲ್ಲಿ ನಿಷೇಧಾರ್ಥದಲ್ಲಿ ಬರುವ ಪ್ರತ್ಯಯವಿದು

ಅ) ದ ಆ) ಅದ

ಇ) ಅದು ಈ) ಅ

ಉ. ______________________________

5. ಮಾಡದೆ – ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

ಅ) ನಿಷೇಧ ಕೃದಂತ ಆ) ಭೂತ ಕೃದಂತ

ಇ) ಕೃದಂತಾವ್ಯಯ ಈ) ಕೃದಂತನಾಮ

ಉ. ______________________________

6. ವರ್ತಮಾನ ಕೃದಂತಕ್ಕೆ ಈ ಪದವು ಉದಾಹರಣೆಯಾಗಿದೆ

ಅ) ಬಾಳುವ ಆ) ಬಾಳದ

ಇ) ಬಾಳುವಿಕೆ ಈ) ಬಾಳಲು

ಉ. ______________________________

7. ಕೃದಂತಭಾವನಾಮಕ್ಕೆ ಈ ಪದವು ಉದಾಹರಣೆಯಾಗಿದೆ

ಅ) ನಗುತ್ತ ಆ) ನಗುವ

ಇ) ನಗದ ಈ) ನಗುವುದು

ಉ. ______________________________

**ಈ. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. ಕೃದಂತಗಳಲ್ಲಿನ ವಿಧಗಳು ________ , ________ ಮತ್ತು ________
2. ಕೃದಂತನಾಮಗಳಲ್ಲಿನ ವಿಧಗಳು ________ , ________ ಮತ್ತು ________
3. ಧಾತುಗಳ ಮೇಲೆ ಭಾವಾರ್ಥದಲ್ಲಿ ಕೃತ್ ಪ್ರತ್ಯಯಗಳು ಸೇರಿ ________ ಎನಿಸುವುವು.
4. ಧಾತುಗಳಿಂದ ಹುಟ್ಟಿ ಅವ್ಯಯದ ಗುಣಗಳನ್ನು ಪಡೆದಂತಹ ಪದಗಳನ್ನು ________ ಎನ್ನುವರು.

**ಉ. ಕೊಟ್ಟಿರುವ ಧಾತುಗಳನ್ನು ಬಳಸಿಕೊಂಡು ಅವುಗಳಿಂದ ಕೃದಂತ ನಾಮ, ಕೃದಂತ ಭಾವನಾಮ ಮತ್ತು ಕೃದಂತಾವ್ಯಯ ಪದಗಳನ್ನು ರಚಿಸಿ.**

| ಧಾತು | ಕೃದಂತನಾಮ | ಕೃದಂತಭಾವನಾಮ | ಕೃದಂತಾವ್ಯಯ |
|---|---|---|---|
| ನೆನೆ | ನೆನೆದ | ನೆನೆಪು | ನೆನೆದು |
| ಓಡು | | | |
| ಉಣ್ಣು | | | |
| ಉಡು | | | |
| ಕೊರೆ | | | |

**ಊ. ಕೊಟ್ಟಿರುವ ಪದಗಳಲ್ಲಿ ಕೃದಂತ ನಾಮ, ಕೃದಂತ ಭಾವನಾಮ ಮತ್ತು ಕೃದಂತಾವ್ಯಯ ಪದಗಳನ್ನು ಪಟ್ಟಿ ಮಾಡಿರಿ.**

ನೋಡಿದ, ಅಂಜಿಕೆ, ಬಾಳಲಿಕ್ಕೆ, ಬರೆಯುವ, ನೋಡಿ, ಅಂಜಲು, ತೊಡದ, ತೊಡುಗೆ,
ನೋಟ, ಅಂಜಿದ, ಬಾಳುವಿಕೆ, ತೊಡದೆ, ಬರವಣಿಗೆ, ಬಾಳುವ, ಬರೆದು.

| ಕೃದಂತನಾಮ | ಕೃದಂತಭಾವನಾಮ | ಕೃದಂತಾವ್ಯಯ |
|---|---|---|
| | | |
| | | |
| | | |
| | | |
| | | |

**ಋ. ಮೊದಲೆರೆಡು ಪದಗಳಿಗಿರುವ ಸಂಬಂಧದಂತೆ ಮೂರನೆ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.**

1. ನಂಬಿಕೆ : ಕೃದಂತಭಾವನಾಮ :: ಮಾಡಿ : ____________
2. ಮಾಡಲು : ಕೃದಂತಾವ್ಯಯ :: ಮಾಟ : ____________
3. ನಡೆಯುವ : ವರ್ತಮಾನ ಕೃದಂತ :: ನಡೆಯದ : ____________
4. ಓಡಿದ : ಕೃದಂತನಾಮ :: ನಗುವುದು : ____________
5. ತಿನ್ನುವುದು : ಕೃದಂತಭಾವನಾಮ :: ತಿಂದ : ____________

**ಎ. ಕೊಟ್ಟಿರುವ ಕೃದಂತ ಪದಗಳನ್ನು ಬಳಸಿಕೊಂಡು ಸ್ವಂತ ವಾಕ್ಯವನ್ನು ರಚಿಸಿ.**

1. ಬರೆದ = ____________________________ .
2. ಹಾಡದ = ____________________________ .
3. ಕೇಳುವ = ____________________________ .
4. ಕಟ್ಟಿದ = ____________________________ .
5. ತಿಳಿವಳಿಕೆ = ____________________________ .
6. ಹೊಳೆಪು = ____________________________ .
7. ಕಾಟ = ____________________________ .
8. ಕಲಿಸಿ = ____________________________ .

**ಏ. ಕೊಟ್ಟಿರುವ ವಾಕ್ಯಗಳಲ್ಲಿರುವ ಕೃದಂತಗಳನ್ನು ಗುರುತಿಸಿ ಬರೆಯಿರಿ.**

| | |
|---|---|
| **ಮಾದರಿ:** ಪಿ.ಬಿ. ಶ್ರೀನಿವಾಸ್‌ರವರು ಹಾಡಿದ ಹಾಡಿನಿಂದ ನನ್ನ ಮನಸ್ಸು ಮುದಗೊಂಡಿತು. | ಹಾಡಿದ |
| ಹುಡುಗನು ಚೆಂಡನ್ನು ಎಸೆದು ಬಂದನು | |
| ಯಾರೂ ಓದದ ಆ ಪುಸ್ತಕವನ್ನು ನೀನೂ ಓದಬೇಡ | |
| ಶಂಕರನ ಬರೆವಣಿಗೆ ತುಂಬಾ ಸೊಗಸಾಗಿದೆ | |
| ಹಾವನ್ನು ಕಂಡಕೂಡಲೇ ಅವಳಲ್ಲಿ ನಡುಕ ಉಂಟಾಯಿತು | |
| ಕನ್ನಡದ ಏಳ್ಗೆಯೇ ನಮ್ಮ ಏಳ್ಗೆ ಎಂದು ನಾವು ಭಾವಿಸಬೇಕು | |
| ಹಾಡುವ ಹುಡುಗಿ ವೇದಿಕೆಗೆ ಬರಲಿಲ್ಲ | |
| ಕರಡಿಯ ಕುಣಿತವನ್ನು ಕಂಡು ಮಕ್ಕಳು ಚಪ್ಪಾಳೆ ತಟ್ಟಿದರು | |

**ಐ. 'ಹೇಳುವ' ಎನ್ನುವ ಕೃದಂತನಾಮಕ್ಕೆ ಲಿಂಗಗಳಿಗನುಗುಣವಾಗಿ ವಿಭಕ್ತಿಪ್ರತ್ಯಯಗಳನ್ನು ಸೇರಿಸಿ ಬರುವ ರೂಪವನ್ನು ಗಮನಿಸಿ ಮಾದರಿಯಂತೆ ಮುಂದುವರೆಯಿರಿ:**

| ಕೃದಂತನಾಮ | ಪುಲ್ಲಿಂಗ | ಸ್ತ್ರೀ ಲಿಂಗ |
|---|---|---|
| ಮಾದರಿ: ಹೇಳುವ | ಅವನು+ಉ = ಹೇಳುವವನು | ಅವಳು + ಉ = ಹೇಳುವವಳು |
| | | |
| | | |
| | | |
| | | |
| | | |

## ವಿದ್ಯಾರ್ಥಿಯ ಸ್ವ-ಮೌಲ್ಯಮಾಪನ

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ಕೃದಂತದ ವಿಧಗಳನ್ನು ಹೆಸರಿಸಬಲ್ಲೇ | | | |
| 2 | ವಾಕ್ಯಗಳಲ್ಲಿರುವ ಕೃದಂತ ಪದಗಳನ್ನು ಗುರುತಿಸಬಲ್ಲೇ | | | |
| 3 | ಕೃದಂತಗಳನ್ನು ಬಳಸಿ ವಾಕ್ಯಗಳನ್ನು ರಚಿಸಬಲ್ಲೇ | | | |

**ಶಿಕ್ಷಕರ ಅಭಿಪ್ರಾಯ**

| | | | | | |
|---|---|---|---|---|---|
| **ಅತ್ಯುತ್ತಮ** | | **ಉತ್ತಮ** | | **ಸಾಧಾರಣ** | |

# 12 ತದ್ಧಿತಾಂತಗಳು

**ಅ. ಕೊಟ್ಟಿರುವ ಪದಗಳಲ್ಲಿನ ಪ್ರತ್ಯಯಗಳನ್ನು ಬೇರ್ಪಡಿಸಿ ಬರೆಯಿರಿ.**

- ಛಲಗಾರ = ____________
- ಜಾಣೆ = ____________
- ಮಾತಾಳಿ = ____________
- ಹತ್ತನೆಯ = ____________
- ಓಲೆಗಾರ = ____________
- ಲೆಕ್ಕಿಗ = ____________
- ಮಡಿವಳ = ____________
- ಹೂವಾಡಿಗ = ____________
- ಕರಿಕ = ____________
- ಲಂಚಗುಳಿ = ____________
- ಒಕ್ಕಲುಗಿತ್ತಿ = ____________
- ಕಮ್ಮಾರ = ____________
- ಅರಸಿ = ____________
- ಹಣವಂತ = ____________
- ಕನ್ನಡಿಗ = ____________
- ಹಾವಾಡಿಗ = ____________
- ಚಾಡಿಕೋರ = ____________
- ವಾಚಾಳಿ = ____________
- ಒಕ್ಕಲಿಗ = ____________
- ಸಿರಿತನ = ____________
- ಚೆಲುವಿಕೆ = ____________
- ಬಿಳುಪು = ____________
- ಹಿರಿಮೆ = ____________
- ರಾಮನಂತೆ = ____________
- ಮನೆಯತನಕ = ____________
- ನನಗೋಸ್ಕರ = ____________

ಪ್ರಾತಿಪದಿಕದ ಮೇಲೆ ವಿಭಕ್ತಿ ಪ್ರತ್ಯಯವು ಸೇರಿ ನಾಮಪದವಾಗುತ್ತದಷ್ಟೆ. ಈ ನಾಮಪದದ ಮೇಲೆ ಬೇರೆ ಬೇರೆ ಅರ್ಥದಲ್ಲಿ ಮತ್ತೆ ಕೆಲವು ಪ್ರತ್ಯಯಗಳು ಬರುತ್ತವೆ. ಇವುಗಳಿಗೆ ತದ್ಧಿತವೆಂದು ಹೆಸರು. ಈ ಪ್ರತ್ಯಯಗಳು ಅಂತ್ಯದಲ್ಲಿ ಬರುವುದರಿಂದ ಇವುಗಳಿಗೆ ತದ್ಧಿತಾಂತಗಳೆಂದು ಕರೆಯುತ್ತಾರೆ.

ಉದಾ:

ಕನ್ನಡವನ್ನು ತಿಳಿದವನು – ಕನ್ನಡಿಗ

ತದ್ಧಿತ ಪ್ರತ್ಯಯಗಳಲ್ಲಿ ತದ್ಧಿತಾಂತ ನಾಮ, ತದ್ಧಿತಾಂತ ಭಾವನಾಮ, ತದ್ಧಿತಾಂತ ಅವ್ಯಯ ಎಂಬ ಮೂರು ವಿಧಗಳಿವೆ.

**ಗಮನಿಸಿ:**

* ವ್ಯಕ್ತಿಯಲ್ಲಿ ಶಾಶ್ವತವಾಗಿ ಇರುವಂತಹ ಭಾವವೇ ತದ್ಧಿತಾಂತಭಾವನಾಮ
* ವ್ಯಕ್ತಿಯಲ್ಲಿ ಹಾಗೆಬಂದು ಹೀಗೆ ಹೋಗುವ ಭಾವವೇ ಕೃದಂತಭಾವನಾಮ

**ಆ. ಕೊಟ್ಟಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.**

ಮಾದರಿ: ಮೋಸಗಾರ = ಮೋಸವನ್ನು + ಮಾಡುವವನು

1. ಪಾಲುಗಾರ = ______________________
2. ಕೋಲುಕಾರ = ______________________
3. ಚೆನ್ನಿಗ = ______________________
4. ಸಿರಿವಂತ = ______________________
5. ಎರಡನೆಯ = ______________________
6. ಮಾಲೆಗಾರ್ತಿ = ______________________

**ಇ. ಕೊಟ್ಟಿರುವ ಭಾವಾರ್ಥಗಳಲ್ಲಿ ತದ್ಧಿತ ಪ್ರತ್ಯಯಗಳನ್ನು ಬಳಸಿ ಒಂದು ಪದ ರಚಿಸಲಾಗಿದೆ, ಹಾಗೆಯೇ ಮತ್ತೊಂದು ಪದ ಬರೆಯಿರಿ.**

1. ತನ = ದೊಡ್ಡವನ ಭಾವ = ದೊಡ್ಡತನ ---> ತನ = ________________ = ________________
2. ಇಕೆ = ಚೆಲುವಿನಭಾವ = ಚೆಲುವಿಕೆ ---> ಇಕೆ = ________________ = ________________
3. ಉ = ಕಿವುಡನಭಾವ = ಕಿವುಡು -----> ಉ = ________________ = ________________
4. ಪು = ಇನಿದರಭಾವ = ಇಂಪು -----> ಪು = ________________ = ________________
5. ಮೆ = ಪಿರಿದರಭಾವ = ಪೆರ್ಮೆ -----> ಮೆ = ________________ = ________________

**ಈ. ಕೊಟ್ಟಿರುವ ಪ್ರಶ್ನೆಗಳಿಗೆ / ಅಪೂರ್ಣ ಹೇಳಿಕೆಗಳಿಗೆ ಪ್ರತಿಯೊಂದಕ್ಕೂ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

1. 'ಕೆಂಪು' ಎಂಬುದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

ಅ) ತದ್ಧಿತಾಂತ ನಾಮ ಆ) ತದ್ಧಿತಾಂತ ಭಾವನಾಮ

ಇ) ತದ್ಧಿತಾಂತ ಅವ್ಯಯ ಈ) ಕೃದಂತ ಭಾವನಾಮ

ಉ. ________________________________________________.

2. 'ಓದಾಳಿ' ಇಲ್ಲಿರುವ ತದ್ಧಿತ ಪ್ರತ್ಯಯ

ಅ) ಆಳಿ ಆ) ಅಳಿ

ಇ) ಳಿ ಈ) ದಾಳಿ

ಉ. ________________________________________________.

3. ‘ಹಿರಿಯನ ಭಾವ’ವನ್ನು ಹೇಳುವುದರ ಪದವಿದು.

ಅ) ಹಿರಿಯ ಆ) ಹಿರಿಕ

ಇ) ಹಿರಿತನ ಈ) ಹಿರಿದು

ಉ. ______________________________ .

4. ಶಮಂತನು ಸಂಜೆಯತನಕ ಮೈದಾನದಲ್ಲಿ ಆಟವನ್ನು ಆಡಿದನು.

ಈ ವಾಕ್ಯದಲ್ಲಿರುವ ‘ತದ್ಧಿತಾಂತ ಅವ್ಯಯ’ ಪದ;

ಅ) ಸಂಜೆಯತನಕ ಆ) ಮೈದಾನದಲ್ಲಿ

ಇ) ಆಟವನ್ನು ಈ) ಆಡಿದನು

ಉ. ______________________________ .

5. ವಿದೇಶದಲ್ಲಿರುವ ಕನ್ನಡಿಗರು ಕನ್ನಡ ರಾಜ್ಯೋತ್ಸವವನ್ನು ಆಚರಿಸಿದರು. ಈ ವಾಕ್ಯದಲ್ಲಿರುವ ‘ತದ್ಧಿತಾಂತ ನಾಮ’

ಅ) ಕನ್ನಡ ಆ) ಕನ್ನಡಿಗರು

ಇ) ರಾಜ್ಯೋತ್ಸವವನ್ನು ಈ) ಆಚರಿಸಿದರು

ಉ. ______________________________ .

**ಉ. ಮೊದಲೆರೆಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.**

1. ಕೋಲುಕಾರ : ತದ್ಧಿತಾಂತ ನಾಮ : : ನುಣುಪು : ____________
2. ಚೆಲುವಿಕೆ : ತದ್ಧಿತಾಂತ ಭಾವನಾಮ : : ಮಾತಾಳಿ : ____________
3. ಅವನಂತೆ : ತದ್ಧಿತಾಂತ ಅವ್ಯಯ : : ಅರಸಿ : ____________
4. ಗೌಡಿಕೆ : ತದ್ಧಿತಾಂತ ನಾಮ : : ನಿನಗಾಗಿ : ____________
5. ಮನೆಯತನಕ : ತದ್ಧಿತಾಂತ ಅವ್ಯಯ : : ಬಳಿಕ : ____________
6. ಗುಣವಂತೆ : ತದ್ಧಿತಾಂತ ನಾಮ : : ಸಿರಿತನ : ____________

**ಊ. ಕೊಟ್ಟಿರುವ ಪದಗಳಲ್ಲಿ ತದ್ಧಿತಾಂತ ನಾಮ, ತದ್ಧಿತಾಂತ ಭಾವನಾಮ, ತದ್ಧಿತಾಂತ ಅವ್ಯಯಗಳನ್ನು ವಿಂಗಡಿಸಿ ಬರೆಯಿರಿ.**

| | | | | | |
|---|---|---|---|---|---|
| ಬೀಗಿತಿ | ಮೂರನೆಯ | ಬಡತನ | ನನ್ನವೊಲು | ಚಂದ್ರನವೊಲ್ | ಇವನಂತೆ |
| ಊರತನಕ | ಕೂರ್ಮೆ | ಹುಡುಗತನ | ಸಿರಿವಂತ | ಉನ್ನತಿಕೆ | ಮಾತಾಳಿ |

| ತದ್ಧಿತಾಂತ ನಾಮ | ತದ್ಧಿತಾಂತ ಭಾವನಾಮ | ತದ್ಧಿತಾಂತ ಅವ್ಯಯ |
|---|---|---|
| | | |
| | | |
| | | |
| | | |

**ಋ. ಕೊಟ್ಟಿರುವ ತದ್ಧಿತಾಂತ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬರೆಯಿರಿ.**

1. ಬಳೆಗಾರ : ______________________________ .
2. ಛಲಗಾರ : ______________________________ .
3. ಹಿರಿಮೆ : ______________________________ .
4. ಸೋಮಾರಿತನ : ______________________________ .
5. ಶಾಲೆಯವರೆಗೆ : ______________________________ .
6. ನಿನ್ನಸಲುವಾಗಿ : ______________________________ .
7. ಅದಕ್ಕೋಸ್ಕರ : ______________________________ .
8. ಅದಕ್ಕಿಂತ : ______________________________ .

**ಎ. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1. 'ಇತಿ, ಗಿತ್ತಿ' ಎಂಬಿವು ______________ ಲಿಂಗದಲ್ಲಿ ಬರುವ ಪ್ರತ್ಯಯಗಳಾಗಿವೆ.
2. ನಾಮಪದಗಳ ಮುಂದೆ ತನ, ಇಕೆ, ಪೂ, ಮೆ ಇತ್ಯಾದಿ ಪ್ರತ್ಯಯಗಳು ಸೇರಿ ______________ ಎನಿಸುವುವು.
3. ನಾಮಪದಗಳಿಗೆ ______________ ಪ್ರತ್ಯಯಗಳು ಸೇರಿ ಆಗುವ ಪದಗಳೇ ತದ್ಧಿತನಾಮಗಳು.
4. 'ಬಡತನ' ಎಂಬುದು ______________ ಭಾವನಾಮಕ್ಕೆ ಉದಾಹರಣೆಯಾಗಿದೆ.
5. 'ಸೂರ್ಯನಂತೆ' ಎಂಬುದು ______________ ಅವ್ಯಯಕ್ಕೆ ಉದಾಹರಣೆಯಾಗಿದೆ.

**ಏ. ಕೊಟ್ಟಿರುವ ವಾಕ್ಯಗಳಲ್ಲಿ ತಪ್ಪುಗಳಿವೆ ಸರಿಪಡಿಸಿ ಬರೆಯಿರಿ.**

1. ಧಾತುಗಳಿಗೆ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತಗಳೆನಿಸುವುವು.

ಉ. ________________________________________

2. ನಾಮಪದಗಳಿಗೆ ಭಾವಾರ್ಥದಲ್ಲಿ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತ ಅವ್ಯಯಗಳೆನಿಸುವುವು.

ಉ. ________________________________________

3. ನಾಮಪದಗಳ ಮೂಲ ರೂಪವೇ ಧಾತುವೆನಿಸುವುದು.

ಉ. ________________________________________

4. 'ಜಾಣತನ' ಎಂಬ ಪದವು ತದ್ಧಿತಾಂತನಾಮಕ್ಕೆ ಉದಾಹರಣೆಯಾಗಿದೆ.

ಉ. ________________________________________ .

**ಐ. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:**

ನಾನು ಸಂತೆ, ಜನರು ವಸ್ತುಗಳನ್ನು ಮಾರಲು ಮತ್ತು ಕೊಳ್ಳಲು ವಾರದಲ್ಲಿ ಒಂದು ದಿನ ಇಲ್ಲಿ ಬಂದು ಸೇರುತ್ತಾರೆ. ನಿಮ್ಮಲ್ಲಿ ಕೆಲವರಿಗೆ ನನ್ನ ಪರಿಚಯ ಇರಬಹುದು. ಆದರೆ ಇತ್ತೀಚಿನವರಿಗೆ ನನ್ನ ಪರಿಚಯ ಕಡಿಮೆ ಎನಿಸುತ್ತದೆ. ಹೀಗಾಗಿ ನನ್ನ ಕಿರು ಪರಿಚಯವನ್ನು ನಾನೇ ಮಾಡಿಕೊಳ್ಳುತ್ತೇನೆ.

ಅದೋ! ಅತ್ತ ನೋಡಿ, ಹಾವನ್ನು ಆಡಿಸುವವನು ಜನರನ್ನು ರಂಜಿಸುತ್ತಿದ್ದಾನೆ. ಹನುಮಂತನಂತೆ ವೇಷ ಧರಿಸಿದವನ ಸುತ್ತ ಮಕ್ಕಳು ಸೇರಿ ಚಪ್ಪಾಳೆ ತಟ್ಟುತ್ತಿದ್ದಾರೆ. ಇತ್ತ ಹೂವನ್ನು ಮಾರುವವಳು ಹೂ ಬೇಕೇ ಹೂವು...... ಎಂದು ಕೂಗುತ್ತಿದ್ದಾಳೆ ಅವಳ ಪಕ್ಕದಲ್ಲೇ ಮಾಲೆಯನ್ನು ಕಟ್ಟುವವನು ಬಿಳುಪಾದ ಹೂಗಳಿಂದ ಮಾಲೆಯನ್ನು ಕಟ್ಟುತ್ತಿದ್ದಾನೆ. ಅಲ್ಲಿ ಚಿತ್ರಕಾರನೊಬ್ಬ ಬಿಡಿಸಿರುವ ಚಿತ್ರವು ಹಿಮಪರ್ವತದಂತೆ ಕಾಣುತ್ತಿದೆ. ಕುಂಬಾರನ ಕೌಶಲದಲ್ಲಿ ರೂಪ ಪಡೆದ ಮಡಕೆಗಳಂತೂ ಎಲ್ಲರ ಗಮನವನ್ನು ಸೆಳೆಯುತ್ತಿವೆ. ಇಲ್ಲಿ ವ್ಯಾಪಾರಿಗಳ ಜಾಣ್ಮೆಯನ್ನು ನಾವು ನೋಡಿಯೇ ತಿಳಿಯಬೇಕು. ಕೆಲವರು ತಮಗಾಗಿ ಖರೀದಿಸಿದರೆ ಮತ್ತೆ ಕೆಲವರು ಮನೆಗೋಸ್ಕರ ಖರೀದಿಸುತ್ತಾರೆ. ನೆರಳಿಗಾಗಿ ವ್ಯಾಪಾರಿಗಳು ಹಾಕಿರುವ ಕೆಂಪು, ಕಪ್ಪು ಚಪ್ಪರಗಳ ಅಂಚಿನವರೆಗೆ ಸಾಗಿದರೆ ಬಯಲಿನಲ್ಲಿ ದನ, ಕುರಿ, ಕೋಳಿಗಳ ಮಾರಾಟ ಜೋರಾಗಿಯೇ ನಡೆಯುತ್ತಿರುತ್ತದೆ.

ಈವರೆಗೆ ನನ್ನ ಪರಿಚಯ ಮಾಡಿಕೊಟ್ಟ ಹೆಮ್ಮೆ ನನಗಿದೆ. ನಾನು ಜನರಾಡುವ ಮಾತುಗಳನ್ನು ಆಲಿಸಿ ಅರಿತು ಅದನ್ನು ತಮ್ಮೊಂದಿಗೆ ಹಂಚಿಕೊಂಡಿದ್ದೇನೆ. ನನ್ನ ಪರಿಚಯ ಮಾಡಿಕೊಳ್ಳುವ ಜೊತೆಗೆ ತಾವೂ ಪ್ರತಿ ಪದಗಳನ್ನು ಭಾಷೆಯ ನೆಲೆಗಟ್ಟಿನಲ್ಲಿ ವಿಮರ್ಶಿಸಿ ನಿಮ್ಮ ಬುದ್ಧಿಮತ್ತೆಯನ್ನು ಓರೆಗೆ ಹಚ್ಚಿಕೊಳ್ಳುವಿರಲ್ಲವೇ?

**1. ಯಾವ ಪದಗಳಿಗೆ ಆಡಿಗ, ಇತ್ತ, ಕಾರ ಪ್ರತ್ಯಯಗಳನ್ನು ಸೇರಿಸಿ ತದ್ಧಿತಾಂತ ನಾಮಗಳಾಗಿ ಮಾಡಬಹುದು?**

ಉ. ______________________________________________

______________________________________________ .

**2. ಯಾವ ಪದಗಳು ತದ್ಧಿತಾಂತ ಅವ್ಯಯಗಳಿಗೆ ಉದಾಹರಣೆಯಾಗಿವೆ?**

ಉ. ______________________________________________

______________________________________________ .

**3. ಇಲ್ಲಿ ಯಾವ ಪದಗಳು ತದ್ಧಿತಾಂತ ಭಾವನಾಮಗಳಿಗೆ ಉದಾಹರಣೆಯಾಗಿವೆ?**

ಉ. ______________________________________________

______________________________________________ .

**4. ಈ ಗದ್ಯಭಾಗದಲ್ಲಿರುವ ತದ್ಧಿತಾಂತ ನಾಮಗಳನ್ನು ಬಿಡಿಸಿ ಬರೆದು ಆ ಪದಗಳಿಗೆ ಸೇರಿರುವ ಪ್ರತ್ಯಯಗಳನ್ನು ಬರೆಯಿರಿ.**

ಉ. ______________________________________________

______________________________________________

______________________________________________

______________________________________________

## ವಿದ್ಯಾರ್ಥಿಯ ಸ್ವ–ಮೌಲ್ಯಮಾಪನ

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ತದ್ಧಿತಾಂತ ಪದಗಳ ವಿಧಗಳನ್ನು ಹೆಸರಿಸಬಲ್ಲೇ | | | |
| 2 | ವಾಕ್ಯಗಳಲ್ಲಿ ಬಂಧಿರುವ ತದ್ಧಿತಾಂತ ಪದಗಳನ್ನು ಗುರುತಿಸಬಲ್ಲೇ | | | |
| 3 | ತದ್ಧಿತಾಂತ ಪದಗಳನ್ನು ಬಳಸಿಕೊಂಡು ವಾಕ್ಯಗಳನ್ನು ರಚಿಸಬಲ್ಲೇ | | | |

**ಶಿಕ್ಷಕರ ಅಭಿಪ್ರಾಯ**

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 13 ವಾಕ್ಯ ಪ್ರಕಾರಗಳು

**ಅ. ಮಾದರಿಯಂತೆ ವಾಕ್ಯಗಳನ್ನು ರಚಿಸಿರಿ.**

**1. ಸಾಮಾನ್ಯ ವಾಕ್ಯ**

ಅ ಮಗು ಹಣ್ಣನ್ನು ಆಸೆ ಪಟ್ಟು ತಿಂದಿತು.

ಆ. ಶಿಕ್ಷಕರು ಮಕ್ಕಳಿಗೆ ಸುಂದರವಾದ ಕಥೆ ಹೇಳಿದರು.

ಇ. ______________________________________________

______________________________________________.

**2. ಸಂಯೋಜಿತ ವಾಕ್ಯ**

ಅ. ಡಾ.ರಾಜ್ ಕುಮಾರ್ ರವರು ಅತ್ಯುತ್ತಮ ನಟರೂ, ಗಾಯಕರೂ ಆಗಿದ್ದರು.

ಆ. ಶಿವಾಜಿಗೆ ಬಾಲ್ಯದಲ್ಲಿ ಒಳ್ಳೆಯ ಸಂಸ್ಕಾರ ದೊರೆಯಿತು. ಆದ್ದರಿಂದ ಅವನ ವ್ಯಕ್ತಿತ್ವ ಆಕರ್ಷಕವಾಗಿ ರೂಪುಗೊಂಡಿತು.

ಇ. ______________________________________________

______________________________________________.

**3. ಮಿಶ್ರ ವಾಕ್ಯ**

ಅ. ಒಳ್ಳೆಯ ಮಳೆ ಬಂದು ಊರಿನ ಕೆರೆಕಟ್ಟೆಗಳು ತುಂಬಿದವಾದರೂ ನಿರೀಕ್ಷಿಸಿದಷ್ಟು ಫಸಲು ಬಾರದೇ ಹೋದಾಗ ರೈತರು ಕಂಗಾಲಾದರು.

ಆ. ಸದೃಢ ಭಾರತವನ್ನು ನಿರ್ಮಾಣ ಮಾಡಲು ಯುವ ಜನತೆ ಕನಸು ಕಾಣುತ್ತಾರೆಯೇ ಹೊರತು ದೃಢ ಸಂಕಲ್ಪದಿಂದ ಪ್ರಯತ್ನಪಡದ ಕಾರಣ ಅವರ ಕನಸು ಇನ್ನೂ ನನಸಾಗದೆ ಉಳಿದಿದೆ.

ಇ. ______________________________________________

______________________________________________.

**ಆ. ಕೊಟ್ಟಿರುವ ವಾಕ್ಯ ವೃಂದದಲ್ಲಿರುವ ಸಾಮಾನ್ಯ ವಾಕ್ಯ, ಸಂಯೋಜಿತ ವಾಕ್ಯ, ಮಿಶ್ರ ವಾಕ್ಯಗಳನ್ನು ಪ್ರತ್ಯೇಕಿಸಿ ಬರೆಯಿರಿ.**

ಬೆಂಗಳೂರಿನಲ್ಲಿ ಒಂದು ಪ್ರಸಿದ್ಧ ಶಾಲೆಯಿದೆ. ಆ ಶಾಲೆಗೆ ಹೆಚ್ಚಿನ ಮಕ್ಕಳು ಪ್ರವೇಶ ಪಡೆದರು ಆದರೆ ಅವರು ಸರಿಯಾಗಿ ಓದುತ್ತಿರಲಿಲ್ಲ. ಪ್ರತಿಷ್ಠಿತ ಶಾಲೆಯಾದರೂ ಮಕ್ಕಳು ಓದುತ್ತಿಲ್ಲವೆಂಬ ಸುದ್ದಿ ಕೇಳಿ ಅವರ ಪೋಷಕರು ಶಾಲೆಯತ್ತ ಓಡೋಡಿ ಬಂದರು.

**1. ಸಾಮಾನ್ಯ ವಾಕ್ಯ**

______________________________________________________________

______________________________________________________________.

**2. ಸಂಯೋಜಿತ ವಾಕ್ಯ**

______________________________________________________________

______________________________________________________________.

**3. ಮಿಶ್ರ ವಾಕ್ಯ:**

______________________________________________________________

______________________________________________________________.

**ಇ. ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಖಾಲಿ ಜಾಗ ಭರ್ತಿ ಮಾಡಿರಿ.**

1. ಒಂದು ಪೂರ್ಣಕ್ರಿಯಾ ಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು ____________ ವಾಕ್ಯವೆಂದು ಕರೆಯುತ್ತಾರೆ.

   (ಮಿಶ್ರವಾಕ್ಯ ಸಂಯೋಜಿತ ವಾಕ್ಯ ಸಾಮಾನ್ಯ ವಾಕ್ಯ ಆಧ್ಯಾಹಾರ ವಾಕ್ಯ)

2. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ____________ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು ಸಂಯೋಜಿತ ವಾಕ್ಯವಾಗಿರುತ್ತದೆ.

   (ಒಂದು ಅನೇಕ ಒಂದುಅಲ್ಲ ಹತ್ತು)

3. 'ಮಕ್ಕಳು ಹಾಲನ್ನು ಕುಡಿಯುತ್ತಾರೆ. ಆದರೆ ಅವರಿಗೆ ಕೊಡಲು ಸಾಕಷ್ಟು ಹಾಲಿಲ್ಲ.'– ಇದು ಈ ವಾಕ್ಯವಾಗಿದೆ ____________ .

   (ಸಂಯೋಜಿತವಾಕ್ಯ ಸಾಮಾನ್ಯವಾಕ್ಯ ಮಿಶ್ರವಾಕ್ಯ ಪ್ರಶ್ನಾರ್ಥಕವಾಕ್ಯ)

4. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂಥ ವಾಕ್ಯವನ್ನು ____________ ಎನ್ನುತ್ತೇವೆ.

   (ಸಾಮಾನ್ಯವಾಕ್ಯ ವಾಕ್ಯವೇಷ್ಠನ ಸಂಯೋಜಿತವಾಕ್ಯ ಮಿಶ್ರವಾಕ್ಯ)

5. ವಾಕ್ಯಗಳನ್ನು ಸ್ಥೂಲವಾಗಿ ____________ ವಿಧಗಳನ್ನಾಗಿ ವಿಂಗಡಿಸಲಾಗಿದೆ.

   (ಒಂದು ಎರಡು ಮೂರು ನಾಲ್ಕು)

**ಈ. ಕೊಟ್ಟಿರುವ ಪದಗಳನ್ನು ಮಾತ್ರ ಬಳಸಿ ಸಾಮಾನ್ಯ ವಾಕ್ಯ, ಸಂಯೋಜಿತ ವಾಕ್ಯ ಮತ್ತು ಮಿಶ್ರ ವಾಕ್ಯಗಳನ್ನು ಕ್ರಮಬದ್ಧವಾಗಿ ಬರೆಯಿರಿ.**

(ಲಕ್ಷಾಂತರ ಜನರು ಆದ್ದರಿಂದ ಮೈಸೂರು ದಸರಾ ಬಂದು ಸೇರಿದರು ನಡೆಯಿತು ಬಹಳ ವೈಭವವಾಗಿ ಜರುಗುವ ಸುದ್ದಿ ತಿಳಿದು)

1. ______________________________

______________________________.

2. ______________________________

______________________________.

3. ______________________________

______________________________.

**ಉ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಸಾಮಾನ್ಯ ವಾಕ್ಯ ಎಂದರೇನು?**

ಉ. ______________________________

______________________________.

**2. ಸಂಯೋಜಿತ ವಾಕ್ಯ ಎಂದರೇನು?**

ಉ. ______________________________

______________________________.

**3. ಮಿಶ್ರ ವಾಕ್ಯ ಎಂದರೇನು?**

ಉ. ______________________________

______________________________.

**ಅಧ್ಯಾಹಾರ:** ವಾಕ್ಯ ಅರ್ಥವತ್ತಾಗಿರಬೇಕಾದರೆ ಕರ್ತೃ, ಕರ್ಮ, ಕ್ರಿಯಾಪದಗಳಿರಬೇಕು. ಕೆಲವು ಕಡೆ ವಾಕ್ಯದಲ್ಲಿ ಇವುಗಳು ಬಿಟ್ಟು ಹೋದಾಗ ವಾಕ್ಯ ಅರ್ಥದ ಪೂರ್ತಿಯಾಗಿ ಇರುವ ಪದಗಳ ಆಧಾರದಿಂದ ಊಹಿಸಿಕೊಂಡು ಸೇರಿಸಿಕೊಳ್ಳುವುದನ್ನು ಅಧ್ಯಾಹಾರ ಎನ್ನಲಾಗುತ್ತದೆ.

# 14 ಲೇಖನ ಚಿಹ್ನೆಗಳು

**ಆ. ಕೊಟ್ಟಿರುವ ಗದ್ಯಭಾಗದಲ್ಲಿರುವ ಲೇಖನ ಚಿಹ್ನೆಗಳನ್ನು ಉದಾಹರಣೆಯಂತೆ ಹೆಸರಿಸಿ.**

ಜಗತ್ತು ಪೂಜಿಸುವುದು ಶಕ್ತಿಯನ್ನು; ದುರ್ಬಲತೆಯನ್ನಲ್ಲ ಎಂಬುದನ್ನು ಯುವಕರು ಸರಿಯಾಗಿ ತಿಳಿದಿರಬೇಕು. ಮೈದಾನದಲ್ಲಿ ದಾಂಡಿಗ ನಾಲ್ಕು ಸಿಕ್ಸರ್ ಬಾರಿಸಿದರೆ ಸಹಸ್ರಾರು ಯುವಕರು ಚಪ್ಪಾಳೆ ತಟ್ಟಿ, ಹುಚ್ಚೆದ್ದು ಕುಣಿದು ಅವನನ್ನು ಹೆಗಲ ಮೇಲೇರಿಸಿಕೊಂಡು ರಥೋತ್ಸವ ಮಾಡುವುದಿಲ್ಲವೇ? ಅದು ಅವನ ಶಕ್ತಿ ಸಾಮರ್ಥ್ಯ ದಕ್ಷತೆಗಳಿಗೆ ಸಲ್ಲಿಸಿದ ಗೌರವವಲ್ಲವೇ?. ಶಕ್ತಿಯನ್ನು ಎಲ್ಲರು ಭಕ್ತಿ ಗೌರವಗಳಿಂದ ನೋಡುತ್ತಾರೆ. "ಶಕ್ತನಾದರೆ ನೆಂಟರೆಲ್ಲಾ ಹಿತರು, ಅಶಕ್ತನಾದರೆ ಆಪ್ತ ಜನರೇ ವೈರಿಗಳು" ಎಂದು ಪುರಂದರದಾಸರು ಹೇಳಿದ ಮಾತು ಎಷ್ಟು ಸತ್ಯ!. ತಂದೆ ತಾಯಂದಿರು ಪ್ರೀತಿಯಿಂದ ಸಾಕಿ ಸಲಹಿದ ಮಗು ಬೆಳೆದು ದುರ್ಬಲನೂ ರೋಗಿಷ್ಟನೂ ದಡ್ಡನೂ ಮೂರ್ಖನೂ ಆದರೆ ಏನೆನ್ನುವರು ಬಲ್ಲಿರಾ?. ಹೌದು ಶಕ್ತಿಗೆ ಎಲ್ಲರೂ ಆಪ್ತರು. ಅಶಕ್ತನನ್ನು ಎಲ್ಲರೂ ತಿರಸ್ಕರಿಸುವರು.

| ಲೇಖನ ಚಿಹ್ನೆಗಳು | ಲೇಖನ ಚಿಹ್ನೆಗಳ ಹೆಸರು |
|---|---|
| ; | ಅರ್ಧವಿರಾಮ |
| | |
| | |
| | |
| | |
| | |

**ಆ. ಕೊಟ್ಟಿರುವ ಗದ್ಯ ಭಾಗಕ್ಕೆ ಸೂಕ್ತವಾದ ಜಾಗದಲ್ಲಿ ಸರಿಯಾದ ಲೇಖನ ಚಿಹ್ನೆಗಳನ್ನು ಹಾಕಿರಿ.**

ಯಾವ ವೆಂಕಟಸುಬ್ಬಯ್ಯ ಎಲ್ಲಿಯ ಹೆಡ್ ಮೇಷ್ಟ್ರು ಇಲ್ಲೇ ಸ್ವಾಮಿ ಮೂರು ಮೈಲಿ ದೂರದ ಬೊಮ್ಮನಹಳ್ಳಿ ಸ್ಕೂಲಿನ ಹೆಡ್ ಮೇಷ್ಟ್ರು ವೆಂಕಟಸುಬ್ಬಯ್ಯ ದೇವರು ಅವರ ಹೊಟ್ಟೆ ತಣ್ಣಗಿಟ್ಟಿರಲಿ ಸ್ವಾಮಿ ಏನಾಗಿತ್ತು ನಿಮ್ಮ ಹೆಂಡತಿಗೆ ಏನೆಂದು ಹೇಳಲಿ ಸ್ವಾಮಿ ಏನೋ ಜ್ವರ ಬಂತು, ನಾಲ್ಕು ದಿನ ಜೋರಾಗಿ ಹೊಡೆಯಿತು ಇದ್ದಕ್ಕಿದ್ದ ಹಾಗೆ ಕಣ್ಮುಚ್ಚಿಕೊಂಡು ಬಿಟ್ಟಳು ಊರವರೆಲ್ಲಾ ಪ್ಲೇಗು ಮಾರಿ ಇರಬಹುದು ಊರುಬಿಟ್ಟು ಹೋಗಿ ಎಂದು ಗಲಾಟೆ ಮಾಡಿದರು ಊರೊಳಕ್ಕೆ ಬರಬೇಡಿ ಎಂದು ತಡೆದುಬಿಟ್ಟರು ವೆಂಕಟಸುಬ್ಬಯ್ಯ ಹೇಳಿ ನೋಡಿದರು ಯಾರು ಹೇಳಿದರೂ ಹಳ್ಳಿಯವರು ಕೇಳಲೇ ಇಲ್ಲ

**ಇ. ಹೊಂದಿಸಿ ಬರೆಯಿರಿ.**

| ಅ ಪಟ್ಟಿ | ಬ ಪಟ್ಟಿ | ಉತ್ತರಗಳು |
|---|---|---|
| ಅರ್ಧ ವಿರಾಮ ಚಿಹ್ನೆ | :– | ________ |
| ಅಲ್ಪ ವಿರಾಮ ಚಿಹ್ನೆ | “ ” | ________ |
| ಪ್ರಶ್ನಾರ್ಥಕ ಚಿಹ್ನೆ | ‘ ’ | ________ |
| ಭಾವ ಸೂಚಕ ಚಿಹ್ನೆ | , | ________ |
| ಉದ್ಧರಣ ಚಿಹ್ನೆ | ! | ________ |
| ಪೂರ್ಣವಿರಾಮ ಚಿಹ್ನೆ | ; | ________ |
| ಆವರಣ ಚಿಹ್ನೆ | ( ) | ________ |
| ವಿವರಣಾತ್ಮಕ ಚಿಹ್ನೆ | ? | ________ |
| ವಾಕ್ಯ ವೇಷ್ಟನ ಚಿಹ್ನೆ | . | ________ |

**ಈ. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ________ ಚಿಹ್ನೆ ಬಳಸುತ್ತೇವೆ.
2. ಹರ್ಷ ಆಶ್ಚರ್ಯ, ಸಂತೋಷ, ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವಾಗ ________ ಚಿಹ್ನೆ ಬಳಸಬೇಕು.
3. ಬರವಣಿಗೆಯಲ್ಲಿ ಪಾರಿಭಾಷಿಕ / ಪ್ರಧಾನ / ವಿಶಿಷ್ಟ ಪದಗಳನ್ನು ಬಳಕೆ ಮಾಡುವಾಗ ಬಳಸುವ ಚಿಹ್ನೆ ________
4. ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ________ ಚಿಹ್ನೆಯನ್ನು ಬಳಸಬೇಕು.
5. ಅನೇಕ ಉಪ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ________ ಚಿಹ್ನೆಯನ್ನು ಬಳಸುತ್ತೇವೆ.

**ಉ. ಎಲ್ಲಾ ಲೇಖನ ಚಿಹ್ನೆಗಳು ಬರುವಂತೆ ಪ್ರತ್ಯೇಕವಾಗಿ ಒಂದು ವಾಕ್ಯ ವೃಂದ ರಚಿಸಿ, ಲೇಖನ ಚಿಹ್ನೆಗಳನ್ನು ಹಾಕಿರಿ.**

________________________________________

________________________________________

________________________________________

________________________________________

________________________________________

ಊ. ಕೊಟ್ಟಿರುವ ಜಾಹೀರಾತನ್ನು ಗಮನಿಸಿ, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

BENGALURU Dr. B.R AMBEDKAR SCHOOL OF ECONOMICS

**ಬೆಂಗಳೂರು ಡಾ|| ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್**

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)

ರಾಜಾಜಿಹಾಲ್, ಸೆಂಟ್ರಲ್‌ಕಾಲೇಜ್‌ಕ್ಯಾಂಪಸ್, ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ

**2019–20ನೇ ಸಾಲಿಗೆ ಐದು ವರ್ಷಗಳ ಇಂಟಿಗ್ರೇಟೆಡ್ ಎಂ.ಎಸ್ಸಿ ಅರ್ಥಶಾಸ್ತ್ರ ಕೋರ್ಸ್‌ಗಾಗಿ ಪ್ರವೇಶಾತಿ ವಿಸ್ತರಣೆ ಅಧಿಸೂಚನೆ**

2019–20ನೇ ಸಾಲಿಗೆ ಐದು ವರ್ಷಗಳ ಇಂಟಿಗ್ರೇಟೆಡ್ ಎಂ.ಎಸ್ಸಿ ಅರ್ಥಶಾಸ್ತ್ರ ಕೋರ್ಸ್‌ಗಾಗಿ ಮೂರು ವರ್ಷಗಳ ನಂತರ ಹೊರ ಹೋಗಬಹುದಾದ ಆಯ್ಕೆಯೊಂದಿಗೆ ಪ್ರವೇಶಾತಿಗಾಗಿ ಈ ಹಿಂದೆ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, https://www.base.ac.inBASE ಗೆ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10/06/2019 ಎಂದು ಪ್ರಕಟಿಸಲಾಗಿತ್ತು. ಹಲವಾರು ಅಭ್ಯರ್ಥಿಗಳು ಕೊನೆಯ ದಿನಾಂಕವನ್ನು ವಿಸ್ತರಿಸುವಂತೆ ಕೋರಿರುವ ಕಾರಣ CUCET 2019 ರ ಪರೀಕ್ಷೆಯನ್ನು ತೆಗೆದುಕೊಂಡಂತಹ ಅಭ್ಯರ್ಥಿಗಳಿಗೆ ಮಾತ್ರ BASE ಗೆ ಅರ್ಜಿ ಸಲ್ಲಿಸಲು, ಹಾಗೂ BASE ಗೆ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸಿದ್ದು, ಅರ್ಜಿ ಶುಲ್ಕವನ್ನು – ರೂ. 200/– ಸಾಮಾನ್ಯ ವರ್ಗ, ರೂ. 100/– ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ (ಅಂಗವಿಕರಿಗೆ ಶುಲ್ಕವಿರುವುದಿಲ್ಲ) ಪಾವತಿಸದೆ ಇರುವವರಿಗೆ, ಶುಲ್ಕ ಪಾವತಿಸಲು ಕೊನೆಯ ದಿನಾಂಕವನ್ನು 28/06/2019 ರವರೆಗೆ ವಿಸ್ತರಿಸಲಾಗಿದೆ.

**ಸಂಪರ್ಕಿಸಿ: ರಾಜಾಜಿ ಹಾಲ್, ಸೆಂಟ್ರಲ್ ಕಾಲೇಜು ಕ್ಯಾಂಪಸ್, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, ಕರ್ನಾಟಕ**
**ಸಕ್ರಿಯ ಸಹಾಯವಾಣಿ: 080 – 22243350 / 70 ಇ–ಮೇಲ್: info@base.ac.in**

DIPR/DDU/531/2019-20

ಸಹಿ/– ಎಂ.ಬಿ. ದ್ಯಾಬೇರಿ, ಭಾಆಸೇ (ನಿವೃತ್ತ), ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

**ಪ್ರಶ್ನೆಗಳು:**

| | |
|---|---|
| ಜಾಹೀರಾತು ಯಾವ ವಿಷಯಕ್ಕೆ ಸಂಬಂಧಪಟ್ಟದ್ದಾಗಿದೆ? | |
| ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿರುವ ಶುಲ್ಕ ಮಿತಿ ಎಷ್ಟು? | |
| ಅರ್ಜಿ ಸಲ್ಲಿಸುವ ವಿಧಾನ ಹೇಗೆ? | |
| ವಿಷಯಕ್ಕೆ ಸಂಬಂಧಿಸಿದಂತೆ ಜಾಹೀರಾತು ನೀಡಿದವರು ಯಾರು? | |
| ಅರ್ಜಿ ಸಲ್ಲಿಸಲು ಇರುವ ಕೊನೆಯ ದಿನಾಂಕ ಯಾವುದು? | |

**ಋ. ನಿಮ್ಮ ಶಾಲೆಯಲ್ಲಿ ಖಾಲಿಯಿರುವ ಪ್ರಥಮ ದರ್ಜೆ ಸಹಾಯಕ ಹುದ್ದೆಯ ಭರ್ತಿಗಾಗಿ ಜಾಹೀರಾತನ್ನು ಸಿದ್ಧಪಡಿಸಿ.**

## ವಿದ್ಯಾರ್ಥಿಯ ಸ್ವ–ಮೌಲ್ಯಮಾಪನ

| ಕ್ರ.ಸಂ | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1 | ವಾಕ್ಯ ಪ್ರಭೇದಗಳನ್ನು ಅರಿತು ಸ್ವತಂತ್ರವಾಗಿ ವಾಕ್ಯಗಳನ್ನು ರಚಿಸಬಲ್ಲೇ. | | | |
| 2 | ವಾಕ್ಯ ರಚನೆಯಲ್ಲಿ ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಬಲ್ಲೇ. | | | |
| 3 | ಜಾಹೀರಾತುಗಳನ್ನು ಓದಿ, ಅರ್ಥ ಮಾಡಿಕೊಳ್ಳಬಲ್ಲೇ. | | | |

**ಶಿಕ್ಷಕರ ಅಭಿಪ್ರಾಯ**

| ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 4 ಕಿರುಪರೀಕ್ಷೆ

**ಅ. ಚೌಕದಲ್ಲಿರುವ ಕೃದಂತ ಮತ್ತು ತದ್ಧಿತಾಂತ ಪದಗಳನ್ನು ಪ್ರತ್ಯೇಕಿಸಿ ಬರೆಯಿರಿ.**

ಅಂಜಿಕೆ, ಮೆರವಣಿಗೆ, ತಿಂದ, ಉಡುಗೆ, ಮಾಡಿ, ಗೆಳೆತನ, ಅವನಂತೆ, ಅವಳಿಗಾಗಿ,

ಹಾವಾಡಿಗ, ಕಲೆಗಾರ, ಸೊಗಸುಗಾರ, ದೊಡ್ಡತನ, ಹೆಮ್ಮೆ, ಬರೆಯುವ, ಓದದ, ಮಾಡಲಿಕ್ಕೆ.

| ಕೃದಂತ | ತದ್ಧಿತಾಂತ | ಕೃದಂತ | ತದ್ಧಿತಾಂತ |
|---|---|---|---|
| | | | |
| | | | |
| | | | |
| | | | |

**ಆ. ಕೊಟ್ಟಿರುವ ವಾಕ್ಯಗಳನ್ನು ಸೂಚನೆಯಂತೆ ಬರೆಯಿರಿ.**

1. ರಾಮನು ಮಾರುಕಟ್ಟೆಗೆ ಹೋದನು, ಅವನು ತರಕಾರಿ ತರಲಿಲ್ಲ.

   (ಈ ವಾಕ್ಯವನ್ನು ಸಂಯೋಜಿತ ವಾಕ್ಯವಾಗಿ ಬರೆಯಿರಿ).

ಉ. ______________________________ .

2. ರಿಸಿಯರ ರೂಪಂ ಕಾಣ್ಗುಮಂದೀತನುಂ ತಪಂಬಡುಗುಮ್.

   (ಈ ವಾಕ್ಯವನ್ನು ಹೊಸಗನ್ನಡ ರೂಪದಲ್ಲಿ ಬರೆಯಿರಿ)

ಉ. ______________________________ .

3. ಪ್ರತಿಭಾ ಕಾರಂಜಿಗೆ ಹೆಚ್ಚು ಮಕ್ಕಳು ಭಾಗವಹಿಸಿದರಾದರೂ ಹೆಚ್ಚು ಬಹುಮಾನಗಳು ದೊರೆಯಲಿಲ್ಲವೆಂದು ತಿಳಿದಾಗ ಶಿಕ್ಷಕರು ಬಹುವಾಗಿ ಮರುಗಿದರು. (ಇದು ಯಾವ ಪ್ರಕಾರದ ವಾಕ್ಯವಾಗಿದೆ)

ಉ. ______________________________ .

4. ಗುರುಗಳು ಮಹೇಶ ಮತ್ತು ಸುರೇಶರನ್ನು ಕುರಿತು ಅಯ್ಯೋ ಮಕ್ಕಳೇ ನಿಮಗೆ ಜವಾಬ್ದಾರಿ ಎಂಬುದು ಇನ್ನು ಬಂದಿಲ್ಲ ನೀವು ಕಷ್ಟಪಟ್ಟು ದುಡಿಯಬೇಕೆಂಬುದೇ ನಿಮ್ಮ ತಂದೆಯ ಆಸೆಯಾಗಿತ್ತು ಎಂದರು.

(ಈ ವಾಕ್ಯವೃಂದಕ್ಕೆ ಸೂಕ್ತಲೇಖನ ಚಿಹ್ನೆಗಳನ್ನು ಹಾಕಿರಿ)

ಉ. ______________________________

______________________________

**ಇ. ಕೊಟ್ಟಿರುವ ಪದಗಳ ಅರ್ಥ ಬರೆಯಿರಿ.**

| | | | |
|---|---|---|---|
| ಕ್ಷೋಭೆ | | ಪನ್ನಗ | |
| ಕಸವರ | | ಗ್ಲಾನಿ | |
| ಅಗಡು | | ಅವನಿ | |
| ಸೂರ್ಯ | | ಎದೆ | |
| ಮೇಘ | | ಗಡ | |
| ಹರಸು | | ಕೆನ್ನ | |
| ವಿಲಾತಿ | | ಅಬ್ಧಿಪ | |
| ತುರಗ | | ಮತ್ತು | |
| ಹಮ್ಮು | | ವಾಜಿ | |
| ಮರಣ | | ಸಂಕಟ | |

**ಈ. ಕೊಟ್ಟಿರುವ ಪದಗಳ ಹೊಸಗನ್ನಡ ರೂಪ ಬರೆಯಿರಿ.**

| | | | |
|---|---|---|---|
| ದ್ರೋಣಂ | | ವಂದಂ | |
| ಕೈಯೊಳ್ | | ಅಪ್ಪೊಡೆ | |
| ಪುದುವಾಟ್ | | ಪೇಟೆ | |

**ಶಿಕ್ಷಕರ ಅಭಿಪ್ರಾಯ**

| | | | | | |
|---|---|---|---|---|---|
| ಅತ್ಯುತ್ತಮ | | ಉತ್ತಮ | | ಸಾಧಾರಣ | |